ಅರಿವು ಸಂಘಟನೆ ಅಭಿವೃದ್ಧಿ

# ಉಜ್ವಲ ಗ್ರಾಮೀಣ ಅಭಿವೃದ್ಧಿ ಸೇವಾ ಸಂಸ್ಥೆ,

## (ಯುಆರ್‌ಡಿಎಸ್‌ಎಸ್) ವಿಜಾಪೂರ.

***Ujwala Rural Development Service society,***
***(URDSS) Vijayapur.***

## ವಾರ್ಷಿಕ ವರದಿ 2015–16



ಸಸಿಗೆ ನೀರು ಹಾಕುವುದರ ಮೂಲಕ ಶಿಕ್ಷಕರ ತರಬೇತಿ ಉದ್ಘಾಟಿಸುತ್ತಿರುವ ಉಪನಿರ್ದೇಶಕರು


***Ujwala Rural Development Service society, (URDSS)***
***Bijapur-586104 Karnatak State, (India)***

ಸಂಪರ್ಕ ವಿಳಾಸ: ಉಜ್ವಲ ಗ್ರಾಮೀಣ ಅಭಿವೃದ್ಧಿ ಸೇವಾ ಸಂಸ್ಥೆ.

12/A, ಶರಣ ನಿಲಯ, ಶಾಂತಿ ನಗರ, ವಿಜಾಪೂರ – 586104. ದೂ : (08352) – 222972. ಮೊ :9448118454

E Mail: ujwala.bijapur@gmail.com / vasuurdss@yahoo.com, Facebook: ujwala ngo Vijayapur

# ¥Àj«r


| ಅ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| | ಪೀಠಿಕೆ | 3 |
| I | ಡೆಸ್ಟಿನೇಶನ್ ಟಾರ್ಗೆಟ್ ಇಂಟರ್‌ವೆನ್‌ಶನ್ ಪ್ರೋಗ್ರಾಮ, ವಿಜಯಪುರ | 3–4 |
| II | ಟ್ರಕ್ಕರ್ಸ್ ಟಾರ್ಗೆಟ್ ಇಂಟರ್‌ವೆನ್‌ಶನ್ ಪ್ರೋಗ್ರಾಮ , ಕೊಪ್ಪಳ | 4–5 |
| III | ಮಕ್ಕಳ ಸಹಾಯವಾಣಿ – 1098 ವಿಜಯಪುರ | 6–8 |
| IV | ಶಿಕ್ಷಣ ಯಾತ್ರಾ ಯೋಜನೆ ದೇವರಹಿಪ್ಪರಗಿ | 8–11 |
| V | ನಮ್ಮೂರು ಯೋಜನೆ ವಿಜಯಪುರ (ಪಡಗಾನೂರ) | 11–14 |
| VI | ಮಹಿಳೆಯರ ಕಾರ್ಯಕ್ರಮಗಳು | 14 |
| VII | ಗಣ್ಯರು/ಅಧಿಕಾರಿಗಳಿಂದ ಸಂಸ್ಥೆಗೆ ಭೇಟಿ ಹಾಗೂ ಅಭಿಪ್ರಾಯ | 14–16 |
| VIII | ಸಂಸ್ಥೆಯಿಂದ ಭಾಗವಹಿಸಿದ ಸಭೆಗಳು | 16–17 |
| IX | ಸಿಬ್ಬಂದಿಗಳು ತರಬೇತಿ ಪಡೆದದ್ದು | 17–18 |
| X | ಸಿಬ್ಬಂದಿಗಳು ತರಬೇತಿ ನೀಡಿದ್ದು | 18–19 |
| XI | ವಿಶೇಷ ಕಾರ್ಯಕ್ರಮಗಳು | 19–20 |
| XII | ಸಾಧನೆಗಳು | 20–21 |
| XIII | ಸರ್ಕಾರಿ ವಿವಿಧ ಇಲಾಖೆಗಳಲ್ಲಿ ಸದಸ್ಯತ್ವ | 21 |
| XIV | ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ಸಂಸ್ಥೆ ಯಲ್ಲಿ ಸೇವೆ | 21 |
| XV | ಆಡಳಿತಾತ್ಮಕ | 21 |
| XVI | ಎದುರಿಸಿದ ಸಮಸ್ಯಗಳು | 21–22 |
| XVII | ಮುಂದಿನ ಯೋಜನೆಗಳು | 22–23 |
| XVIII | ಸಹಕಾರ | 23 |
| XIX | ವಿವಿಧ ಒಕ್ಕೂಟಗಳಲ್ಲಿ ಉಜ್ವಲ | 23 |
| XX | ಉಪಸಂಹಾರ | 24 |

# ಉಜ್ವಲ ಗ್ರಾಮೀಣ ಅಭಿವೃದ್ಧಿ ಸೇವಾ ಸಂಸ್ಥೆ, ವಿಜಾಪೂರ–586104
## ವಾರ್ಷಿಕ ವರದಿ –2015–16

**ಪೀಠಿಕೆ:–**

ಸಂಸ್ಥೆಯು 23 ವರ್ಷಗಳಿಂದ ಮಹಿಳೆ & ಮಕ್ಕಳ ಗ್ರಾಮೀಣಾಭೀವೃದ್ಧಿಯನ್ನು ಸಮುದಾಯ ಮುಖಂಡತ್ವದೊಂದಿಗೆ ಪರಿಸರ ಅಭಿವೃದ್ಧಿ, ಮಕ್ಕಳು ಶಾಲೆಯಲ್ಲಿರುವಂತೆ ನೋಡಿಕೊಳ್ಳುವುದು. ರೈತರಿಗೆ ಸಾವಯವ ಕೃಷಿ ಬಗ್ಗೆ ಪ್ರೇರಣೆ ನೀಡುವುದು. ತೊಂದರೆಯಲ್ಲಿರುವ ಮಕ್ಕಳಿಗೆ ತಕ್ಷಣ ರಕ್ಷಣೆ ನೀಡಿ, ಸರ್ಕಾರಿ ವ್ಯವಸ್ಥೆಯಲ್ಲಿ ಪುನರ್ವಸತಿಗೊಳಿಸುವುದು. ಕೊಪ್ಪಳ ಜಿಲ್ಲೆಯಲ್ಲಿ ಟ್ರಕ್ ಡ್ರೈವರ್‌ಗಳಿಗೆ ಎಚ್‌ಐವಿ ಅರಿವು ಹಾಗೂ ನಿಯಂತ್ರಣ ಮಾಡುವುದು. ವಿಜಯಪುರ ಜಿಲ್ಲೆಯಲ್ಲಿ ಹೊರರಾಜ್ಯದಿಂದ ಕಾರ್ಖಾನೆಗಳಲ್ಲಿ, ಸಣ್ಣ ಸಣ್ಣ ಉದ್ದಿಮೆಗಳಲ್ಲಿ ಹೊರರಾಜ್ಯದಿಂದ ವಲಸೆ ಬಂದ ಜನರಿಗೆ ಲೈಂಗಿಕ ಖಾಯಿಲೆಗಳು ಹಾಗೂ ಎಚ್‌ಐವಿ ಬಗ್ಗೆ ಅರಿವು ನೀಡಿ ಸೋಂಕಿತರಿಗೆ ಚಿಕಿತ್ಸೆ ಒದಗಿಸಲಾಗಿದೆ. ವಿಜಯಪುರ ಜಿಲ್ಲೆಯಲ್ಲಿ ಮಕ್ಕಳ ಸಹಾಯವಾಣಿಯ ಮುಖಾಂತರ ಮಕ್ಕಳ ರಕ್ಷಣೆ ಮಾಡುವುದು, ಶಿಕ್ಷಣ ಯಾತ್ರೆ ಮುಖಾಂತರ ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಅಂಗನವಾಡಿಗಳನ್ನು ಸುಸ್ಥಿತಿ ಜೊತೆಜೊತೆಗೆ ಸಶಕ್ತತೆ ಮಾಡುವ ಸೇವೆ ಮಹಿಳಾ ಮತ್ತು ಮಕ್ಕಳ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ನಡೆದಿದೆ. ಸರ್ಕಾರದ ಆರ್ಥಿಕ ನೆರವಿಲ್ಲದೆ ಸ್ಥಳೀಯ ಸಮುದಾಯದ ನಾಯಕತ್ವದೊಂದಿಗೆ 9 ವರ್ಷದಿಂದ ಎಚ್‌ಐವಿ ಮಕ್ಕಳ ರಕ್ಷಣೆ ಸ್ವಂತ ಕಟ್ಟಡದಲ್ಲಿ ಸಾಗಿರುತ್ತದೆ. 500 ಕ್ಕಿಂತ ಹೆಚ್ಚು ಗಿಡಗಳನ್ನು ಬೆಳೆಸಿ ಪರಿಸರಾಭಿವೃದ್ಧಿ ಮಾಡಲಾಗುತ್ತದೆ.

ಬಾಲ್ಯವಿವಾಹ, ಬಿಕ್ಷೆ ಬೇಡುವ ಮಕ್ಕಳು, ಬಾಲಕಾರ್ಮಿಕ, ಅನಾಥರು, ಏಕ ಪಾಲಕರು, ಬೀದಿ ಮಕ್ಕಳ ರಕ್ಷಣೆ ನಿರಂತರವಾಗಿ ಸಂಸ್ಥೆಯಿಂದ ರಕ್ಷಿಸಲಾಗುತ್ತಿದೆ. ಸರ್ಕಾರದ ವಿವಿಧ ಇಲಾಖೆಯವರು, ಸರ್ಕಾರೇತರ ವಿವಿಧ ಗಣ್ಯರು ನಮ್ಮ ಯೋಜನೆಗಳಿಗೆ ಭೇಟಿ ನೀಡಿ ಪ್ರಂಶಸೆ ಮಾಡಿದ್ದಾರೆ. ಹಲವಾರು ಅಭಿವೃದ್ಧಿ ಪರ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಕಾರ್ಯಕರ್ತರಿಗೆ ವಿವಿಧ ತರಬೇತಿಗಳನ್ನು ಕೊಡಿಸಿ, ಸೇವೆಗೆ ಸಶಕ್ತರನ್ನಾಗಿ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿಯ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಸಂಸ್ಥೆ ಸಕ್ರೀಯವಾಗಿ ಪಾಲ್ಗೊಳ್ಳುತ್ತಲಿದೆ. ಸ್ನಾತಕೋತ್ತರ ಸಮಾಜ ಅಧ್ಯಯನ ವಿಭಾಗದ ವಿದ್ಯಾರ್ಥಿಗಳು ಸಂಸ್ಥೆಯ ಕಾರ್ಯಕರ್ತರಿಗೆ ಹೆಗಲು ಕೊಟ್ಟು ಸೇವೆ ಸಲ್ಲಿಸುತ್ತಾರೆ. ದೇಶದ ಸ್ಥಳೀಯ ದಾನಿ ಸಂಸ್ಥೆಗಳು, ದಾನಿಗಳು ಸಹಾಯ–ಸಹಕಾರ ನೀಡುತ್ತಿದ್ದಾರೆ. ವಿವಿಧ ಇಲಾಖೆಗಳ ಸಹಯೋಗ ಮರೆಯುವಂತಿಲ್ಲ. ಆದರ್ಶ, ಮಾದರಿ ಸೇವೆ ಸಲ್ಲಿಸಿ ಸಮುದಾಯ ಸಮಾಜಕ್ಕೆ ಮಾದರಿ ನೀಡಲು ಪ್ರಯತ್ನಿಸುತ್ತೇವೆ.

**ಡೆಸ್ಟಿನೇಶನ್ ಟಾರ್ಗೆಟ್ ಇಂಟರ್‌ವೆನ್ಶನ್ ಪ್ರೋಗ್ರಾಮ, ವಿಜಯಪುರ.**

ಈ ಸಂಸ್ಥೆಯು ಕೆಸಾಪ್ಸ್ ಬೆಂಗಳೂರು ಇವರ ಸಹಯೋಗದೊಂದಿಗೆ ಈ ಜಿಲ್ಲೆಯಲ್ಲಿ ಹೊರಜಿಲ್ಲೆ/ರಾಜ್ಯ ಒಳ ವಲಸೆ ಜನರಿಗಾಗಿ ಹೆಚ್.ಐ.ವಿ ಕುರಿತು ಅರಿವು, ಮಾಹಿತಿ ನೀಡುವುದರೊಂದಿಗೆ ವಿವಿಧ ಸರಕಾರಿ ಸೇವಾ ಸೌಲಭ್ಯಗಳನ್ನು ದೊರಕಿಸಿ ಕೊಡುವುದು. ಹಾಗೂ ಉಚಿತ ರಕ್ತ ತಪಾಸಣೆ ಹಾಗೂ ಗುಪ್ತ ಖಾಯಿಲೆಗಳಿಗೆ ಚಿಕಿತ್ಸೆ ಒದಗಿಸುವುದು. ವಿವಿಧ ನಿಯಂತ್ರಣಾ ಕ್ರಮಗಳನ್ನು 10 ಜನರ ತಂಡದೊಂದಿಗೆ ಸೇವಾ ಸೌಲಭ್ಯಗಳನ್ನು ನೀಡಲಾಯಿತು.

ಈ ಸೇವೆಗಳನ್ನು ಸಕ್ಕರೆ ಕಾರ್ಖಾನೆಗಳು, ಕಬ್ಬು ಕಡಿಯುವವರು, ಇಟ್ಟಂಗಿ ಬಟ್ಟಿಗಳು, ಕಟ್ಟಡ ಕಾರ್ಮಿಕರು, ಸ್ಟೋನ್ ಕ್ರಶರ್, ಎನ್.ಟಿ.ಪಿ.ಸಿ ವಿವಿಧ ಹಂತಗಳಲ್ಲಿಯ ಜನರಿಗೆ ಒದಗಿಸಲಾಗಿದೆ. ಜಿಲ್ಲೆಯ 33 ವಿವಿಧ ಜಾಗಗಳಲ್ಲಿ 40.788 (ಗಂ. 37826, ಹೆ. 2962) ಜನರ ಗುಂಪುಗಳಲ್ಲಿ ಅರಿವು ಹಾಗೂ ವಿವಿಧ ಸೌಲಭ್ಯಗಳನ್ನು ನೀಡಲಾಯಿತು.

ವ್ಯಕ್ತಿಗತವಾಗಿ ಒಟ್ಟು 938 (ಗಂ.883, ಹೆ.55 ) ತಿಳಿಸಲಾಗಿದೆ. 8 ಸಮೂಹ ಸಭೆಗಳಲ್ಲಿ ಜಿಲ್ಲೆಯಲ್ಲಿನ ಸೇವಾ ಸೌಲಭ್ಯಗಳ ಕುರಿತು ಹತ್ತಿರದ ಜನರನ್ನು ಕೂಡಿಸಿ ಕಾರ್ಯಕ್ರಮದ ಗುರಿ ಉದ್ದೇಶ ಮತ್ತು ಆರೋಗ್ಯದ ಮಾಹಿತಿ ನೀಡಿ ಒಟ್ಟು 475 ಕಾರ್ಮಿಕರು ತಜ್ಞರಿಂದ ಆರೋಗ್ಯದ ಕುರಿತು ಯೋಜನೆಯಿಂದ ಮಾಹಿತಿ ಪಡೆದಿದ್ದಾರೆ. ಇಲ್ಲಿ ಸರಕಾರಿ ಜಿಲ್ಲಾ ಆಸ್ಪತ್ರೆಯ ಏಡ್ಸ್ ನಿಯಂತ್ರಣಾಧಿಕಾರಿ, ಸಂಸ್ಥೆಯ ಮುಖ್ಯಸ್ಥರು, ಕಾರ್ಖಾನೆ, ಹಾಗೂ ಕಾರ್ಮಿಕ ಮುಖಂಡರ ಸಹಯೋಗದೊಂದಿಗೆ ನಡೆಸಲಾಗಿತ್ತು.

ಅಪಾಯದಲ್ಲಿರುವ ಜನರನ್ನು ಗುರುತಿಸಿ ಹೆಚ್.ಐ.ವಿ ಮಾಹಿತಿ ನೀಡಿ ನಿಯಂತ್ರಣ ಮಾಡುವಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು 3 ತಾಲೂಕುಗಳಲ್ಲಿ ಒಟ್ಟು 12.089 ಜನರಿಗೆ (ಗಂ.11473 ಹೆ.560) ವಿವರ ನೀಡಲಾಯಿತು. ಅದರಲ್ಲಿ ಒಟ್ಟು 7136 ಜನ (ಗಂ. 6892 ಹೆ. 244) ಜನರಿಗೆ ಅನುಸರಣಾ ಕ್ರಮ ಮಾಡಲಾಗಿದೆ.

ಗುಪ್ತ ಖಾಯಿಲೆಗಳಿಗೆ ಅವರು ವಾಸಿಸುವ ಸ್ಥಳಗಳಲ್ಲಿ ಶಿಬಿರ ನಡೆಸಿ ಒಟ್ಟು 4976 ಕಾರ್ಮಿಕರಲ್ಲಿ (ಗಂ. 4710 ಹೆ 266) ಇವರಿಗೆ ಎಸ್.ಟಿ.ಐ ಖಾಯಿಲೆಗಳ ಕುರಿತು ತರಬೇತಿ ಹೊಂದಿದ ವೈದ್ಯರಿಂದ ಹಾಗೂ ಸಮಾಲೋಚಕರಿಂದ ಸಮಾಲೋಚನೆ ಮಾಡಿಸಿ ಒಟ್ಟು 109 ಕಾರ್ಮಿಕರಿಗೆ (ಗಂ. 99 ಹೆ. 10) ಚಿಕಿತ್ಸೆ ಕೊಡಿಸಿ ಅನುಸರಣೆ ಮಾಡಲಾಯಿತು.

ರಕ್ತ ತಪಾಸಣಾ ಹಾಗೂ ಸಮಾಲೋಚನಾ ಶಿಬಿರಗಳ ಮೂಲಕ ಒಟ್ಟು 31 ಕ್ಷೇತ್ರಗಳಲ್ಲಿ 2773 ವಲಸೆ ಕಾರ್ಮಿಕರಿಗೆ (ಗಂ.2735 ಹೆ. 38) ರಕ್ತ ತಪಾಸಣೆ ಮಾಡಿ, ಪಲಿತಾಂಶ ಸ್ಥಳದಲ್ಲೆ ನೀಡಲಾಯಿತು. ಇದರಲ್ಲಿ 6 ಜನ ಸೋಂಕಿತರೆಂದು (ಗಂ.5 ಹೆ.1) ಗುರುತಿಸಿ ಜಿಲ್ಲಾ ಆಸ್ಪತ್ರೆಯ ಎ.ಆರ್.ಟಿ ಕೇಂದ್ರಕ್ಕೆ ಸಂಪರ್ಕ ಕಲ್ಪಿಸಿಕೊಡಲಾಯಿತು.

ಈ ಜನರಿಗೆ ಹೆಚ್.ಐ.ವಿ ಹೆಚ್ಚಿನ ಅರಿವು ನೀಡಲು ಕೆಸಾಪ್ಸ್ ಸಿದ್ದಪಡಿಸಿದ ಸಿನಿಮಾಗಳನ್ನು 23 ಪ್ರದೇಶಗಳಲ್ಲಿ ತೋರಿಸಲಾಯಿತು. ಇಲ್ಲಿ ಒಟ್ಟು 647 ವಲಸೆ ಕಾರ್ಮಿಕರು ಪಾಲ್ಗೊಂಡಿದ್ದರು.

ಪರಿಣಾಮಕಾರಿಯಾಗಿ ಯೋಜನಾ ಅನುಷ್ಠಾನಗೊಳ್ಳಲು ಕಾರ್ಖಾನೆಗಳ ಮುಖ್ಯಸ್ಥಳ ಮಾನವ ಸಂಪನ್ಮೂಲ ಅಧಿಕಾರಿಗಳು ಸುರಕ್ಷತಾ ಅಧಿಕಾರಿಗಳಿಗೆ ಅಭಿಯಂತರರು ಮಕಾದಮ್‌ಗಳೊಂದಿಗೆ ಮಾತನಾಡಿ ಮನವರಿಕೆ ಮಾಡಿ, ಜನರನ್ನು ಹೆಚ್.ಐ.ವಿ ಯಿಂದ ರಕ್ಷಣೆ ನೀಡುವ ಕುರಿತು ಕಾರ್ಯಕ್ರಮಕ್ಕೆ ಸಹಕಾರ ನೀಡುವಂತೆ 60 ವಕಾಲತ್ತು ಸಭೆಗಳನ್ನು ಮಾಡಲಾಯಿತು. ಅದರಲ್ಲಿ 183 ಜನ ಪಾಲ್ಗೊಂಡಿದ್ದರು.

ಸಾಮಾಜಿಕ ನಿರೋಧ ವಿತರಣೆಯಲ್ಲಿ 31 ಕ್ಷೇತ್ರಗಳಲ್ಲಿ ಸಾಮಾಜಿಕ ನಿರೋಧ ಬಾಕ್ಷಗಳನ್ನು ಇಟ್ಟು ಅದರ ಉಪಯೋಗ ಕುರಿತು ಪ್ರಾತ್ಯಕ್ಷಿಕೆ ನೀಡಿ ಅವರಿಗೆ ಸದಾ ಸಿಗುವಂತೆ ಸಮಾನ ಮನಸ್ಕರ ಮೂಲಕ ಒಟ್ಟು 10,105 ನಿರೋಧಗಳನ್ನು ವಿತರಿಸಲಾಯಿತು.

4 ವಲಸೆಗಾರರ ತಂಗುದಾಣದಲ್ಲಿ ವಿವಿಧ ಮಾಹಿತಿ ಶಿಕ್ಷಣದೊಂದಿಗೆ ಒಳ ವಲಸೆಗಾರರಿಗೆ ಹೆಚ್.ಐ.ವಿ ಆರೋಗ್ಯ ಹಾಗೂ ವಿವಿಧ ಸೇವೆಗಳ ಕುರಿತು ಸಮಾಲೋಚಿಸಿ ಮಾಹಿತಿ ನೀಡಲಾಯಿತು. ಜಿಲ್ಲಾ ಏಡ್ಸ್ ನಿಯಂತ್ರಣ ಹಾಗೂ ತಡೆಗಟ್ಟುವ ಘಟಕದಿಂದ ನಡೆಯುವ ಮಾಸಿಕ ಸಭೆಯಲ್ಲಿ ಅಭಿವೃದ್ಧಿ ವರದಿ ನೀಡಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗುತ್ತಿತ್ತು.

**ಟ್ರಕ್ಕರ್ಸ್ ಟಾರ್ಗೆಟ್ ಇಂಟರ್‌ವೆನ್ಶನ್ ಪ್ರೋಗ್ರಾಮ, ಕೊಪ್ಪಳ.**

ಉಜ್ವಲ ಕೆಸಾಪ್ಸ್ ಸಹಯೋಗದೊಂದಿಗೆ ಕೊಪ್ಪಳ ಜಿಲ್ಲೆಯಲ್ಲಿ ಹೊಸಳ್ಳಿ ಗ್ರಾಮದ ಟ್ರಾನ್ಸ್‌ಪೋರ್ಟ್ ಏರಿಯಾದಲ್ಲಿ ಕಾರ್ಯಾಲಯ ಹೊಂದಿ 8 ಜನ ಕಾರ್ಯಕರ್ತರ ತಂಡದೊಂದಿಗೆ ಲಾರಿ ಡ್ರೈವರ್ ಹಾಗೂ ಕ್ಲಿನರ್‌ಗಳಿಗೆ ಹೆಚ್.ಐ.ವಿ/ಏಡ್ಸ್ ಮಾಹಿತಿ ಕ್ಲಿನಿಕ್ ಕ್ಯಾಂಪ್‌ಗಳು ಐ.ಸಿ.ಟಿ.ಸಿ ಆರೋಗ್ಯ ಇಲಾಖೆಗಳಲ್ಲಿ ಸಿಗುವ ಸೌಲಭ್ಯಗಳನ್ನು ಹಾಗೂ ಕಾರ್ಮಿಕ ಇಲಾಖೆಯ ಸೌಲಭ್ಯಗಳನ್ನು ಒದಗಿಸಲು ತಂಡ ಶ್ರಮಿಸಿದೆ.

30 ಕ್ಷೇತ್ರಗಳಲ್ಲಿ 292 ಗುಂಪು ಸಭೆಗಳಲ್ಲಿ 39.560 ಜನರಿಗೆ ಮಾಹಿತಿಯನ್ನು ನೀಡಿ ಹೆಚ್.ಐ.ವಿ ನಿಯಂತ್ರಿಸುವಲ್ಲಿ ಅನುಸರಿಸುವ ಕ್ರಮಗಳ ಕುರಿತು ಗುಂಪು ಚಟುವಟಿಕೆ ಮುಖಾಂತರ ಖಾಯಿಲೆ ಬರುವ ಮಾರ್ಗಗಳು,

ತಡೆಗಟ್ಟುವ ವಿಧಾನಗಳು, ಲೈಂಗಿಕ ಖಾಯಿಲೆಗಳಿಗೆ ಚಿಕಿತ್ಸೆ, ಉಚಿತ ಆಪ್ತ ಸಮಾಲೋಚನೆ ಮಾಡಿ ತಜ್ಞವೈದ್ಯರಿಂದ ಅರಿವು ಹಾಗೂ ಚಿಕಿತ್ಸೆ ನೀಡಲಾಯಿತು.

ಖುಷಿ ಕ್ಲಿನಿಕ್‌ಗಳಲ್ಲಿ ಲೈಂಗಿಕ ಖಾಯಿಲೆಗಳ ತಪಾಸಣೆ ಮಾಡಿ ಸಮಾಲೋಚಿಸಿ ಸೂಕ್ತ ಚಿಕಿತ್ಸೆ, ನಿರೋಧ ಬಳಕೆ ಅವಶ್ಯಕತೆ ಪ್ರಾತ್ಯಕ್ಷಿಕೆ ಮಾಡಿ ತಿಳಿಸಲಾಗುತ್ತಿತ್ತು. 180 ಕ್ಲಿನಿಕ್‌ಗಳಲ್ಲಿ ಒಟ್ಟು 10.089 ಜನರಿಗೆ ಸಮಾಲೋಚಿಸಿ 20 ಜನರಿಗೆ ಚಿಕಿತ್ಸೆ ನೀಡಲಾಯಿತು. 28 ಐ.ಸಿ.ಟಿ.ಸಿ ಕ್ಯಾಂಪ್‌ಗಳಲ್ಲಿ 795 ಜನರನ್ನು ಕಳಿಸಿ ಚಿಕಿತ್ಸೆ, ಔಷಧೋಪಚಾರ, ರಕ್ತ ತಪಾಸಣೆ ಮಾಡಿ ಸ್ಥಳದಲ್ಲೆ ಪಲಿತಾಂಶ ನೀಡುತ್ತಿದ್ದೇವು.

22 ಜನ ಸೋಂಕಿತರೆಂದು ಗುರುತಿಸಿ ಸರಕಾರಿ ಜಿಲ್ಲಾ ಆಸ್ಪತ್ರೆಯ ಎ.ಆರ್.ಟಿ ಕೇಂದ್ರಕ್ಕೆ ಶಿಫಾರಸ್ಸು ಮಾಡಲಾಯಿತು. ಹೆಚ್ಚು ಜನ ಡ್ರೈವರ್ ಇರುವ 4 ಪ್ರದೇಶಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆಟಗಳ, ಕಥೆಗಳ, ಉಪನ್ಯಾಸ, ಪ್ರಾತ್ಯಕ್ಷಿಕೆ ಗುಂಪು ಸಂವಹನಗಳ ಮುಖಾಂತರ ಖಾಯಿಲೆ ಕುರಿತು ಮಾಹಿತಿ ಕುರಿತು 155 ಜನ ಮಾಹಿತಿ ಪಡೆದುಕೊಂಡರು ಹಾಗೂ ಚಟುವಟಿಕೆಗಳಲ್ಲಿ ಒಟ್ಟು 567 ಜನ ಭಾಗವಹಿಸಿದ್ದರು.

39 ವಕಾಲತ್ತು ಸಭೆಗಳಲ್ಲಿ 339 ಜನರು ದಾಬಾ ಮಾಲಿಕರು, ಟ್ರಾನ್ಸ್ ಕಂಪನಿಗಳ ಮ್ಯಾನೆಜರುಗಳು, ಕಮಿಷನ್ ಏಜಂಟರು, ಪಂಚರ್ ತೆಗೆಯುವ ಶಾಪ್‌ನವರು ಗ್ಯಾರೇಜ್ ಮಾಲಿಕರೊಂದಿಗೆ ಯೋಜನೆಯ ಮಾಹಿತಿ ನೀಡಿ ಇವರ ಸಹಕಾರ ಪಡೆಯಲಾಯಿತು.

ಸಾಮಾಜಿಕ ನಿರೋಧ ಮಾರುಕಟ್ಟೆಯನ್ನು 52 ಜಾಗಗಳಲ್ಲಿ ಇಟ್ಟು 86.537 ನಿರೋಧಗಳನ್ನು ವಿತರಿಸಲಾಯಿತು. ಡ್ರೈವರ್‌ಗಳಿಗಾಗಿ 8 ಬೀದಿ ನಾಟಕಗಳನ್ನು ನೀಡಲಾಯಿತು. ಒಟ್ಟು ಇಲ್ಲಿ 450 ಜನ ಭಾಗವಹಿಸಿ ಮಾಹಿತಿ ಪಡೆದುಕೊಂಡರು. ಅದರಂತೆ ಫಿಲ್ಮ್ ಶೋ ಹಮ್ಮಿಕೊಂಡು ಹೆಚ್.ಐ.ವಿ ಬಗ್ಗೆ ಒಟ್ಟು 400 ಜನರಿಗೆ ತೋರಿಸಲಾಯಿತು. ಪ್ರತಿ ತಿಂಗಳು ಜಿಲ್ಲಾ ಏಡ್ಸ್ ಸಮನ್ವಯ ಸಭೆಯನ್ನು ತ್ರೈಮಾಸಿಕ ಸಭೆಯನ್ನು ಜಿಲ್ಲಾ ಕಾರ್ಯ ನಿರ್ವಾಹಕ ಅಧಿಕಾರಿಗಳ ಸಭೆ ಕರೆದು ನಮ್ಮಿಂದ ಮಾಹಿತಿಗಳನ್ನು ಪಡೆದು ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸುತ್ತಿದ್ದಾರೆ. ಜಿಲ್ಲಾ ಏಡ್ಸ್ ನಿಯಂತ್ರಣ ಹಾಗೂ ತಡೆಗಟ್ಟುವ ಘಟಕದ ಜಿಲ್ಲಾಮಟ್ಟದ ಮಾಸಿಕ ಪ್ರಗತಿ ಪರಶೀಲನಾ ಸಭೆಯಲ್ಲಿ ಪಾಲ್ಗೊಂಡು ವರದಿ ಒಪ್ಪಿಸುತ್ತಿದ್ದೇವು.

**ಹುಲಗಿ ಜಾತ್ರೆಯಲ್ಲಿ ಐ.ಸಿ.ಟಿ.ಸಿ ಕ್ಯಾಂಪ್**

ದಿ.10 ರಿಂದ 15 ಮೇ 2015 ರವರೆಗೆ ಹುಲಗಿ ಜಾತ್ರೆಯಲ್ಲಿ ಕೆಸಾಪ್ಸ್ ಟ್ರಕ್ಕರ್ ಯೋಜನೆಯ ಎಲ್ಲ ಕಾರ್ಯಕರ್ತರು ಪಾಲ್ಗೊಂಡು ಎಚ್.ಐ.ವಿ/ಏಡ್ಸ್ ಕುರಿತು ಮಾಹಿತಿ ನೀಡಿ, ರಕ್ತ ಪರೀಕ್ಷೆ ಮಾಡಲಾಯಿತು. ಒಟ್ಟು 268 ಜನ ಇದರ ಲಾಭ ಪಡೆದುಕೊಂಡರು. ಇವರಲ್ಲಿ ಇಬ್ಬರು ಸೋಂಕಿತರೆಂದು ಗುರುತಿಸಲಾಯಿತು.

ಜೂನ್ 11 ರಂದು ಕೊಪ್ಪಳದ ಆಯುರ್ವೇದಿಕ್ ಮಹಾವಿದ್ಯಾಲಯದಲ್ಲಿ ರಕ್ತದಾನ ಶಿಬಿರ ಹಮ್ಮಿಕೊಂಡಾಗ ನಮ್ಮ 9 ಜನ ಕಾರ್ಯಕರ್ತರು ರಕ್ತದಾನ ಮಾಡಿದರು. ಜೂನ್ 30 ರಂದು ಗಂಗಾವತಿಯಲ್ಲಿ ರಕ್ತದಾನ ಮಾಡಿದರು. ಸರಕಾರಿ ಆಸ್ಪತ್ರೆಯಲ್ಲಿ ಜನೇವರಿ 8 ರಂದು ಹೊಸಪೇಟಿ, ಅಗಷ್ಟ 26 ರಂದು ಮುನಿರಾಬಾದನಲ್ಲಿ ನಿಟೇಲ ಪ್ಯಾಕ್ಟರಿಯಲ್ಲಿ ರಕ್ತದಾನ ಶಿಬಿರವನ್ನು ಹಮ್ಮಿಕೊಂಡು ನಮ್ಮ ಸಿಬ್ಬಂದಿಗಳು ಸೇವೆ ಸಲ್ಲಿಸಿದರು.

GMR ಕಂಪಯಲ್ಲಿಯ 45 ಸಿಬ್ಬಂದಿಗಳಿಗೆ ಹೆಚ್.ಐ.ವಿ ಏಡ್ಸ್ ಕುರಿತು ಸಮಗ್ರ ಮಾಹಿತಿ ಒದಗಿಸಲಾಯಿತು. ಮ್ಯಾನೇಜರಾದ ಧನರಾಜ ಅವರು ಸಹಕರಿಸಿದರು. ವಿಶೇಷವಾಗಿ ಕಾರ್ಮಿಕ ಇಲಾಖೆಯಿಂದ ಖಾಸಗಿ ವಾಹನ ಚಾಲಕರ ಅಪಘಾತ ಪರಿಹಾರ ನಿಧಿ ಯೋಜನೆಯಡಿ 30 ಡ್ರೈವರ್‌ಗಳಿಗೆ ಗುರುತಿನಚೀಟಿ ಒದಗಿಸಲಾಯಿತು.

ಜೂನ್ 8 ಮತ್ತು 9 ರಂದು ಪೌಜಿ ಹಾಗೂ ಮಧುರೈ ಮೆಸ್,ದಾಭಾಗಳಲ್ಲಿ 15 ಗಿಡಗಳನ್ನು ಹಚ್ಚಿ ವನಮಹೋತ್ಸವ ಕಾರ್ಯಕ್ರಮ ಮಾಡಲಾಯಿತು.

**ವಿಶ್ವ ಏಡ್ಸ್ ದಿನಾಚರಣೆ**

ವಿಜಯಪುರ ಜಿಲ್ಲಾ ಆರೋಗ್ಯ ಇಲಾಖೆಯಿಂದ ಹಮ್ಮಿಕೊಂಡ ವಿಶ್ವ ಏಡ್ಸ್ ದಿನಾಚರಣೆಯಲ್ಲಿ ಅದರಂತೆ ಡಿಸೆಂಬರ 4 ರಂದು ಕೊಪ್ಪಳದಲ್ಲಿ ಸಂಸ್ಥೆಯ ಕೆಸಾಪ್ಸ್ ವಲಸೆ ಹಾಗೂ ಟ್ರಕ್ಕರ್ ಕಾರ್ಯಕ್ರಮದ ಎಲ್ಲ ಕಾರ್ಯಕರ್ತರು ಉಜ್ವಲ ಸಂಸ್ಥೆಯ ಮುಖ್ಯಸ್ಥರು ಪಾಲ್ಗೊಂಡಿದ್ದರು.
ಎರಡೂ ಕಡೆ ಜಾತಾದಲ್ಲಿ ಕಾರ್ಯಕರ್ತರು ವಾದ್ಯಗೋಷ್ಟಿ ಹಾಗೂ ಘೋಷಣೆಗಳೊಂದಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಜನಜಾಗೃತಿ ಮೂಡಿಸಲಾಯಿತು. ಜಿಲ್ಲಾಡಳಿತ ಎಲ್ಲ ಸ್ವ–ಸೇವಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಮುಂದೆ ಅದು ವೇದಿಕೆ ಕಾರ್ಯಕ್ರಮವಾಗಿ ಮಾರ್ಪಟ್ಟಿತು.

ಮಾರ್ಚ 24 ರಂದು ಟಿ.ಬಿ ದಿನಾಚರಣೆಯಲ್ಲಿ ಎಲ್ಲ ಕಾರ್ಯಕರ್ತರು ಕೊಪ್ಪಳದ ಹಳೆ ಜಿಲ್ಲಾ ಆಸ್ಪತ್ರೆಯಲ್ಲಿ ಪಾಲ್ಗೊಂಡಿದ್ದರು. ಜಿಲ್ಲೆಯ ಆರೋಗ್ಯ ಇಲಾಖೆಯ ಜಿಲ್ಲಾ ಆರೋಗ್ಯಾಧಿಕಾರಿಗಳು, ಸಮಾಲೋಚಕರು, ಪ್ರಯೋಗಾಲಯ ತಂತ್ರಜ್ಞರು ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಸಹಕಾರ ನೀಡಿದರು.

**ಮಕ್ಕಳ ಸಹಾಯವಾಣಿ – 1098 ವಿಜಯಪುರ.**

ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಡಿಯಲ್ಲಿ ಚೈಲ್ಡ್‌ಲೈನ್ ಇಂಡಿಯಾ ಪೌಂಡೆಶನ್ ಮುಖಾಂತರ ಜಿಲ್ಲೆಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ 24x7 PÁ® ¸ÉÃªÉ ಸಲ್ಲಿಸುವ ಯೋಜನೆ ಮುಂದು ವರೆದಿದೆ ಕಾರ್ಯಕ್ಷೇತ್ರದಲ್ಲಿ 9 ಜನ ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದಾರೆ. ಎಲ್ಲ ನಗರಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳ ಸಹಾಯವಾಣಿ–1098 ಕಾರ್ಯಪ್ರವೃತ್ತವಾಗಿದೆ.

ಮಾಹಿತಿ ಮಳಿಗೆ ಮೂಲಕ ಜನಸಂದಣಿ ಇರುವ 7 ಸ್ಥಳಗಳಲ್ಲಿ 2650 ಜನರಿಗೆ 1098ದ ಸ್ಟಾಲ್ ಮೂಲಕ ಮಕ್ಕಳ ರಕ್ಷಣೆ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು. ತೆರೆದ ಮನೆ 10 ಕಾರ್ಯಕ್ರಮಗಳನ್ನು NGO, ಶಾಲೆಗಳು, ಬಾಲಮಂದಿರ, ದೇವಸ್ಥಾನ, ಸಿಕಾರಖಾನೆ, ವಲಸೆ ಜನ, ಐನಾಪೂರ ತಾಂಡಾ, ಮುರಾರ್ಜಿ ವಸತಿ ಶಾಲೆಗಳಲ್ಲಿ ಶಿವಶರಣಿ ಅಂದ ಮಕ್ಕಳ ಶಾಲೆಗಳಲ್ಲಿ 1098 ಬಗ್ಗೆ ಗಂ.774 ಹೆ.736 ಒಟ್ಟು 1510 ಮಕ್ಕಳಿಗೆ ಅರಿವು ನೀಡಲಾಯಿತು. 8 ಸಮುದಾಯ ಸಭೆಗಳಲ್ಲಿ 383 ಜನರಿಗೆ ಕೊಳಗಿರಿ ಕಾಲನಿ, ದರ್ಗಾಜೈಲು, ರುಡಸೆಟ್ ಹೀಗೆ ವಿವಿಧ ಸ್ಥಳಗಳಲ್ಲಿ 1098 ದ ಕುರಿತು ಅರಿವು ನೀಡಿದೆವು.

ಮಕ್ಕಳಿಗೆ ಸಂಬಂಧಿಸಿದಂತೆ ಅಟೋ ಚಾಲಕರಿಗೆ, ಹೊಟೇಲ ಮಾಲಿಕರಿಗೆ, ಪಾನ್‌ಶಾಪ್ ಮಾಲಿಕರಿಗೆ, ಸಾರಿಗೆ ಇಲಾಖೆ ಸಿಬ್ಬಂದಿಗಳಿಗೆ, ವ್ಯಾಪಾರಸ್ಥರಿಗೆ, ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಸ್ವ–ಸಹಾಯ ಸಂಘಗಳಿಗೆ/ಯುವಕ ಸಂಘಗಳಿಗೆ ಹಾಗೂ ಗ್ರಾಮ ಪಂಚಾಯಿತಿ ಸದಸ್ಯರಿಗೆ ಹೀಗೆ ಒಟ್ಟು 142 ವಕಾಲತ್ತು ಸಭೆಗಳಲ್ಲಿ 1644 ಜನರಿಗೆ 1098 ದ ಬಗ್ಗೆ ತಿಳಿಸಲಾಯಿತು. 27/05/2015 ರಂದು ಸಮನ್ವಯ ಸಭೆ ಸಂಸ್ಥೆಯಲ್ಲಿಯೇ ನಡೆಸಿ ಮಕ್ಕಳ ರಕ್ಷಣೆಯಲ್ಲಿ ಮಕ್ಕಳ ಸಹಾಯವಾಣಿಯೊಂದಿಗೆ ಮಕ್ಕಳಿಗೆ ಸಂಬಂಧಿಸಿದ ವಿವಿಧ ಇಲಾಖೆಗಳ 16 ಜನ ಅಧಿಕಾರಿಗಳು ಭರವಸೆ ನೀಡಿದರು.

29/09/2015 ರಂದು ವಿಜಯಲಕ್ಷ್ಮೀಯವರ ತರೆದತಂಗುದಾಣದಲ್ಲಿ ಮಕ್ಕಳಿಗೆ ಸಿಹಿ ಹಂಚಿ ರಾಖಿ ಹುಣ್ಣಿಮೆಯನ್ನು ಹಿರಿಯ ಬಾಲಕರ ಬಾಲಮಂದಿರದಲ್ಲಿ ಬಾಲಕಿಯರ ಬಾಲಮಂದಿರದಲ್ಲಿ ಆಚರಿಸಲಾಯಿತು. ಬಿಕ್ಷುಕರು ಬಾಲಕಾರ್ಮಿಕರನ್ನು ಈ ವರ್ಷದಲ್ಲಿ ರೇಡ್ ಮಾಡಿ 54 ಮಕ್ಕಳನ್ನು ರಕ್ಷಿಸಿ CWC UÉ ಒಪ್ಪಿಸಲಾಯಿತು. 7 ಸಾಮೂಹಿಕ ವಿವಾಹಗಳಲ್ಲಿ 1098 ವಿವಾಹ ತಡೆಯಲು ಭಾಗವಹಿಸಿ 105 ಮಕ್ಕಳನ್ನು ರಕ್ಷಿಸಲಾಯಿತು.

ವಾರದ ಒಟ್ಟು 46 ಮಾಸಿಕ ಸಭೆಗಳ ಮುಖಾಂತರ ತಂಡದ ಸದಸ್ಯರಿಗೆ ಕರೆದು ಕ್ರಿಯಾ ಯೋಜನೆ ಎದುರಿಸಿದ ಸವಾಲುಗಳ ಗುರಿ ತಲುಪಲು ಹೀಗೆ ಸೇವೆ ಮಾಡುವುದು. ಅವಶ್ಯಕ ಸಂಪನ್ಮೂಲಗಳ ಸಂಗ್ರಹಣ ಕಾರ್ಯಕ್ಷೇತ್ರದಲ್ಲಿ ಸೇವೆಗೆ ತಂತ್ರಗಳು ದಾಖಲಾತಿ ನಿರ್ವಹಣೆ ಹೀಗೆ ಹಲವಾರು ವಿಷಯಗಳ ಕುರಿತು ಚರ್ಚಿಸಿ ತಂಡದ ಸದಸ್ಯರಿಗೆ ಸಲಹೆ ಮಾರ್ಗದರ್ಶನ ನೀಡಲಾಯಿತು. 21 ಸ್ವಯಂ ಸೇವಾ ಸಂಸ್ಥೆಗಳ ಮುಖ್ಯಸ್ಥರಿಗೆ ಸ್ತ್ರೀ ಶಕ್ತಿ ಭವನದಲ್ಲಿ 01/09/2015 ರಂದು ಸಭೆಯಲ್ಲಿ 1098 ದ ಬಗ್ಗೆ ತಿಳಿಸಲಾಯಿತು.

**ಮಕ್ಕಳಿಗೆ ನೀಡಿದ ಸೌಲಭ್ಯಗಳು ಹಾಗೂ ಪ್ರಕರಣಗಳು**

- ಬಾಲ ಕಾರ್ಮಿಕರು –47
- ಬಾಲ್ಯ ವಿವಾಹ ತಡೆದಿದ್ದು –105
- ಲೈಂಗಿಕ ದೌರ್ಜನ್ಯ ಪ್ರಕರಣಗಳು –05
- ದೈಹಿಕ ಹಿಂಸೆ ಪ್ರಕರಣಗಳು –18
- ಶಾಲೆಯಲ್ಲಿ ಶಿಕ್ಷೆಗೊಳಗಾದ ಮಕ್ಕಳು –06
- ಜೀತದ ಮಕ್ಕಳು –02
- ತಂದೆ ತಾಯಿಗಳಿಂದ ಬೇರ್ಪಟ್ಟ ಹಸುಗೂಸುಗಳು –07
- ಬಿಕ್ಷುಕ ಮಕ್ಕಳು –13
- ಕಳೆದು ಹೋದ ಮಕ್ಕಳು –07
- ಅಪೌಷ್ಟಿಕ ಮಕ್ಕಳು –02
- ಮಕ್ಕಳ ಪುನರ್ವಸತಿ ಕಲ್ಪಿಸಿದ್ದು –68
- ಆರೋಗ್ಯ ತುರ್ತು ಸೇವೆ –55
- ಶಿಕ್ಷಣಕ್ಕಾಗಿ ಪಾಲಕರು, ಮಕ್ಕಳು ಸಹಾಯ ಕೇಳಿದ್ದು –91
- ಮರಳಿ ಮನೆಗೆ ಸೇರಿಸಿದ್ದು –19
- ಮಾನಸಿಕ ಬೆಂಬಲ –6
- ಸರ್ಕಾರದ ವಿವಿಧ ಸೇವೆಗಳಿಗೆ ಲಿಂಕ್ ಮಾಡಿದ್ದು –73
- ಪಾಲಕರ ಸಹಾಯ ಕೇಳಿದ್ದು –06

ಒಟ್ಟು 526 ಪ್ರಕರಣಗಳಲ್ಲಿ ತಂಡದ ಸದಸ್ಯರು ಸೇವೆ ಸಲ್ಲಿಸಿದರು.

**ಆಲಮೇಲ ಪ್ರಕರಣ**

ಸಮಾಜ ಕಲ್ಯಾಣ ಇಲಾಖೆಯಿಂದ ಆಲಮೇಲ (ಸಿಂದಗಿ ತಾಲೂಕು) ದಲ್ಲಿ ನಡೆಯುವ ಕಿತ್ತೂರು ಚೆನ್ನಮ್ಮಾ ಹೆಣ್ಣು ಮಕ್ಕಳ ವಸತಿ ಶಾಲೆಯಲ್ಲಿ 22/08/2014 ರಲ್ಲಿ ವಿಜಯಕುಮಾರ ಯಂಟಮಾನ ಎನ್ನುವ ಅಡುಗೆ ಸಹಾಯಕನಿಂದ ಮಕ್ಕಳಿಗೆ ಆದ ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯದ ಕುರಿತು ಹಲವು ವರ್ಷಗಳಿಂದ ಪ್ರಕರಣ ಜರುಗುತ್ತಿತ್ತು. ಈ ಘಟನೆ ಪತ್ತೆ ಹಚ್ಚಿದ್ದರಿಂದ ಆಲಮೇಲ ಹಳೆಯ ಕಟ್ಟಡದಿಂದ ಸದ್ಯ ಹೊಸ ಕಟ್ಟಡ ವಿಭೂತಿ ಹಳ್ಳಿಗೆ ಸ್ಥಳಾಂತರವಾಗಿದೆ. ಈ ಪ್ರಕರಣ ಪೋಕ್ಸೊ ಕಾನೂನಿನಡಿ ವಿಶೇಷ ಮಕ್ಕಳ ನ್ಯಾಯಾಲಯದಲ್ಲಿ ಪ್ರಕರಣ ಮುಂದುವರೆದಿದೆ.

**ಬಾಲ್ಯವಿವಾಹ ತಡೆಯುವುದು**

ಸಂಸ್ಥೆಯಿಂದ 105 ಬಾಲ್ಯ ವಿವಾಹಗಳನ್ನು ತಡೆಗಟ್ಟಿ ಬೇರೆ ಮೂರು ಮದುವೆಗಳನ್ನು ಯಾದಗಿರಿ 2, ಗುಲ್ಬರ್ಗಾ 1 ಬಾಲ್ಯವಿವಾಹ ತಡೆಯಲು ಆ ಜಿಲ್ಲೆಯ ಪೋಲಿಸ್ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡಿ ಬಾಲ್ಯವಿವಾಹ ತಡೆಗಟ್ಟಲಾಯಿತು.

ಕರ್ನಾಟಕದಲ್ಲಿ ಬಾಲ್ಯವಿವಾಹ ಪ್ರಕರಣಗಳಲ್ಲಿ 3 ನೇ ಸ್ಥಾನದಲ್ಲಿ ಜಿಲ್ಲೆಯಿದೆ. 1999 ರಿಂದ ಬಾಲ್ಯವಿವಾಹ ತಡೆಗಾಗಿ ಕಂಕಣತೊಟ್ಟು ಸೇವೆ ಸಲ್ಲಿಸುತ್ತಿರುವಾಗ ಚೈಲ್ಡ್‌ಲೈನ್ ಆಸರೆಗೆ ಬಂದು ಹೆಚ್ಚಿನ ಕರ್ತವ್ಯ ನಿಲ್ಲಿಸಲು ಸಾದ್ಯವಾಯಿತು.

ಉಜ್ವಲ ಸಂಸ್ಥೆಯೊಂದಿಗೆ ಕೈ ಜೋಡಿಸಿದ ಮಕ್ಕಳ ಸಹಾಯವಾಣಿ–1098, ಪೋಲಿಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಕಲ್ಯಾಣ ಸಮಿತಿಯವರ ಸಹಯೋಗದೊಂದಿಗೆ ದಿಟ್ಟತನದಿಂದ ಬಾಲ್ಯವಿವಾಹ ನಿಲ್ಲಿಸುತ್ತಾ ಸಂಸ್ಥೆ ಮಕ್ಕಳ ರಕ್ಷಣೆ ಮಾಡಿದೆ. ರಾಜ್ಯದಲ್ಲಿ ಗರಿಷ್ಟ ಬಾಲ್ಯ ವಿವಾಹ ತಡೆದ ಜಿಲ್ಲೆ ವಿಜಯಪುರವಾಗಿದೆ.

**ವಲಸೆ ಜನರಿಗೆ 1098 ದ ಬಗ್ಗೆ ಅರಿವು**

ದಿ.15/11/2015 ರಂದು ವಜ್ರಹನುಮಾನ ನಗರದ ಪ್ರದೇಶಗಳಲ್ಲಿ 70 ಕುಟುಂಬಗಳ ಜನರನ್ನು ಕೂಡಿಸಿ ಸಾಯಂಕಾಲ ಶಿಕ್ಷಣ, ಸ್ವಚ್ಛತೆ, ಆರೋಗ್ಯದ ಬಗ್ಗೆ ಅರಿವು ಮೂಡಿಸಲಾಯಿತು. ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಇವರು ಕುಡಿಯುವ ನೀರಿನ ಸಮಸ್ಯೆ ಹೇಳಿದ್ದರಿಂದ ಮಹಾನಗರಪಾಲಿಕೆಯಿಂದ 2 ಕುಡಿಯುವ ನೀರಿನ ನಳಗಳನ್ನು ಹಾಕಿಸಲಾಯಿತು. 30 ಜನ ಬಾಲಕಾರ್ಮಿಕರನ್ನು ಗುರುತಿಸಿ ಆ ಮಕ್ಕಳನ್ನು ಮುಖ್ಯ ವಾಹಿನಿ ಶಾಲೆಗೆ ಸೇರಿಸಲಾಗಿದೆ. ಮಾಧ್ಯಮ ಮಿತ್ರರಾದ ಪ್ರಜಾವಾಣಿಯವರು ವಲಸೆ ಮಕ್ಕಳ ಕುರಿತು ವಿಶೇಷ ವರದಿ ಆದರಿಸಿ ಜಿಲ್ಲಾಡಳಿತ ಮಕ್ಕಳ ಕಡೆ ಗಮನ ಹರಿಸಿ ಮುಖ್ಯವಾಹಿನಿಗೆ ಈ ಮಕ್ಕಳನ್ನು ಸೇರಿಸಲು ಸಾಧ್ಯವಾಯಿತು.

ದಿ.17/11/2015 ರಂದು ಕೇಂದ್ರ ಬಸ್ ನಿಲ್ದಾಣದಲ್ಲಿ ಐ.ಇ.ಸಿ ಮಳಿಗೆಯಿಂದ ಮೈಕ್ ಮುಖಾಂತರ ಸಾರ್ವಜನಿಕರಿಗೆ ಮಕ್ಕಳ ರಕ್ಷಣೆ ಕುರಿತು ಸಮಗ್ರ ಮಾಹಿತಿಗಳನ್ನು ಪ್ರವಾಸಿಗರಿಗೆ ತಿಳಿಸಲಾಯಿತು. ಅದರಂತೆ ದಿ.18 ರಂದು ರೈಲ್ವೆ ನಿಲ್ದಾಣದಲ್ಲಿ ಅರಿವು ನೀಡಲಾಯಿತು. ದಿ.20 ರಂದು ನಗರದ ಪ್ರಮುಖ ಬೀದಿಗಳಲ್ಲಿ, ಕೊಳಗೇರಿಗಳಲ್ಲಿ, ಸರ್ಕಾರಿ ಕಛೇರಿ ಹತ್ತಿರ ವಿರುವ ಜನಸಂದಣಿ ಪ್ರದೇಶಗಳಲ್ಲಿ ಮಕ್ಕಳ ರಕ್ಷಣೆ ಕುರಿತು ಮೈಕ್ ಮುಖಾಂತರ ಮಕ್ಕಳ ಸಹಾಯವಾಣಿಯ 1098 ದ ವಿವಿಧ ಸೇವೆಗಳ ಸೇವೆಗಳ ಕುರಿತು ತಿಳಿಸಲಾಯಿತು.

**ಚೈಲ್ಡ್ ಲೈನ್ ಸೆ ದೊಸ್ತಿ**

ದಿ.14 ರಿಂದ 20 ನವ್ಹೆಂಬರ 2015 ವರೆಗೆ ಮಕ್ಕಳ ಹಕ್ಕುಗಳ ಕುರಿತು ಚೈಲ್ಡ್ ಲೈನ್ ಸೆ ದೊಸ್ತಿ ಕಾರ್ಯಕ್ರಮ ಹಮ್ಮಿಕೊಂಡು ದಿ. 14 ರಂದು ಹೆಚ್ಚುವರಿ ಪೋಲಿಸ್ ವರಿಷ್ಟಾಧಿಕಾರಿಗಳಾದ ಎನ್.ಎಸ್ ಪಾಟೀಲರಿಗೆ ಬ್ಯಾಂಡಗಳನ್ನು ಕೈಗೆ ಕಟ್ಟುವುದರ ಮೂಲಕ ಆಚರಿಸಲಾಯಿತು. ದಿ.15 ರಂದು ಸರ್ಕಾರಿ ಬಾಲಕರ ಬಾಲ ಮಂದಿರದಲ್ಲಿ **ಮಕ್ಕಳ ಮೇಲಿನ ದೌರ್ಜನ್ಯ ತಡೆಯುವಲ್ಲಿ ಸಮಾಜದ ಪಾತ್ರ.** ಈ ವಿಷಯದ ಕುರಿತು ನಿಬಂಧ ಸ್ಪರ್ಧೆ ಏರ್ಪಡಿಸಿ, ಪ್ರಥಮ, ದ್ವಿತೀಯ, ತೃತೀಯ ಬಹುಮಾನ ನೀಡಿದರು. ಅಂದಿನ ದಿನ ಸಾಯಂಕಾಲ 4 ಘಂಟೆಗೆ ಅಂಬೇಡ್ಕರ್ ವೃತ್ತದಲ್ಲಿ ಅನೌಪಚಾರಿಕ ಶಿಕ್ಷಣ ಕೇಂದ್ರ ಹಾಗೂ 1098 ದ ಸಹಯೋಗದಲ್ಲಿ ಸಾರ್ವಜನಿಕ ಸಭೆ ಏರ್ಪಡಿಸಲಾಗಿತ್ತು. ಮಕ್ಕಳ ರಕ್ಷಣೆಗೆ ನಾವೆಲ್ಲರೂ ಸಿದ್ಧ ಎಂದು ಎಲ್ಲ ಮಕ್ಕಳು ದೊಡ್ಡವರು ಎಂದು ಪ್ರಮಾಣವಚನ ಸ್ವೀಕರಿಸಿದರು. ಮಕ್ಕಳಿಗೆ ಸಂಬಂಧಿಸಿದ ಜಿಲ್ಲೆಯ ಎಲ್ಲ ಅಧಿಕಾರಿಗಳು ಪಾಲ್ಗೊಂಡಿದ್ದರು. ದಿ.16 ರಂದು ಗಾಂಧಿ ವೃತ್ತದ ಎಸ್‌ಜೆಪಿಯು ಅಧಿಕಾರಿಗಳಾದ ಶ್ರೀ ಬಿ.ಎಮ್ ಅಸೂದೆಯವರು ಚೈಲ್ಡ್ ಲೈನ್ ಸ್ಟಿಕ್ಕರ್‌ಗಳನ್ನು ವಾಹನಗಳಿಗೆ ಅಂಟಿಸುವುದರ ಮುಖಾಂತರ ಉದ್ಘಾಟಿಸಿದರು.

**ತೆರೆದ ಮನೆ ಖೈದಿಗಳಿಗಾಗಿ:–**ದಿ.9/11/2015 ರಂದು ವಿಜಯಪುರ ಮುಖ್ಯ ಕಾರಾಗೃಹದಲ್ಲಿ 400 ಜನ ಖೈದಿಗಳಿಗೆ ತರೆದ ಮನೆ ಕಾರ್ಯಕ್ರಮ ಮೂಲಕ ಅವರ ಮಕ್ಕಳ ರಕ್ಷಣೆ, ಪುನರ್ವಸತಿ, ಶಿಕ್ಷಣದ ಕುರಿತು ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು, ಮಕ್ಕಳ ನ್ಯಾಯ ಕಾಯಿದೆ ಸಮಿತಿ ಸದಸ್ಯರು, ಉಜ್ವಲ ಸಂಸ್ಥೆಯ

ಮುಖ್ಯಸ್ಥರು, ಮಕ್ಕಳ ಸಹಾಯವಾಣಿಯ ಕಾರ್ಯಕರ್ತರು ಜೈಲಿನ ಅಧೀಕ್ಷಕರು ಪಾಲ್ಗೊಂಡಿದ್ದರು. ಖೈದಿಗಳು ಆಗಮಿಸಿದ ಅಧಿಕಾರಿಗಳಿಗೆ ತಮ್ಮ ಕುಟುಂಬದ ಮಕ್ಕಳಿಗೆ ಇರುವ ಸಮಸ್ಯೆಗಳ ಕುರಿತು ಸಂವಹನ ಮೂಲಕ ಪರಿಹಾರ ಸಲಹೆಗಳನ್ನು ಪಡೆದುಕೊಂಡರು.

**ಶಿಕ್ಷಣ ಯಾತ್ರಾ ಯೋಜನೆ ದೇವರ ಹಿಪ್ಪರಗಿ**

ಇಂಡಿಯಾ ಲಿಟ್ರಸಿ ಪ್ರೊಜೆಕ್ಟ್ ಸಹಯೋಗದೊಂದಿಗೆ ಸಿಂದಗಿ ತಾಲೂಕಿನ ದೇವರ ಹಿಪ್ಪರಗಿ ವಿಭಾಗದಲ್ಲಿ 32 ಪ್ರಾಥಮಿಕ ಶಾಲೆ, 37 ಅಂಗನವಾಡಿಗಳು, ಸಬಲಿಕರಣ–ಸಶಕ್ತಿಕರಣಕ್ಕಾಗಿ 11 ಗ್ರಾಮಗಳು, 9 ತಾಂಡಾಗಳು ಹಾಗೂ 7 ವಸತಿಗಳಲ್ಲಿ 7 ಜನ ಕಾರ್ಯಕರ್ತರು ಸೇವೆ ಸಲ್ಲಿಸುತ್ತಿದ್ದಾರೆ.

ಈ ಯೋಜನೆಯಲ್ಲಿ ಮಕ್ಕಳ ಸ್ನೇಹಿ ಪಾಲಕ, ಶಾಲೆ, ಸಮುದಾಯ, ಶಿಕ್ಷಕರು ಹಾಗೂ ಗ್ರಾಮ ಪಂಚಾಯಿತಿಯವರು ಎಲ್ಲ ಮಕ್ಕಳ ಹಿತದೃಷ್ಟಿ ಕಾಪಾಡುವ ಕಾರ್ಯ ಮಾಡುತ್ತಿದ್ದೇವೆ.

ಜೂನ ತಿಂಗಳಲ್ಲಿ ಕಾರ್ಯಕ್ರಮ ಪ್ರಾರಂಭಿಸಿ ಅಗಷ್ಟ ತಿಂಗಳಲ್ಲಿ ಸಿಬ್ಬಂದಿ ನೇಮಕ ಮಾಡಿಕೊಳ್ಳಲಾಯಿತು. ಕಾರ್ಯಕರ್ತರಿಗೆ ಸಾಮರ್ಥ್ಯಾಭಿವೃದ್ಧಿಗೆ ಯೋಜನೆಯ ಮಾಹಿತಿ, ಕಾರ್ಯಕ್ಷೇತ್ರದ ಸೇವೆಗಳು, ಮಕ್ಕಳ ನ್ಯಾಯ ಕಾಯಿದೆ, ಎಸ್.ಡಿ.ಎಮ್.ಸಿ ಯೋಜನೆ ಮಕ್ಕಳ ಹಕ್ಕು, ಶಿಕ್ಷಣದ ಹಕ್ಕು, 1098 ದ ಸೇವೆಗಳು ವರದಿ ಮಾಡುವ ಬಗ್ಗೆ, ಮಕ್ಕಳ ಸಂಘ, ಬಾಲಕಾರ್ಮಿಕ ಸಮಿತಿಗಳು ಎಸ್.ಡಿ.ಎಮ್.ಸಿ ಎಲ್ಲ ಹಳ್ಳಿಗಳ ಶೈಕ್ಷಣಿಕ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳ ಕುರಿತು ಸೆಪ್ಟಂಬರ, ಅಕ್ಟೋಬರ, ನವ್ಹೆಂಬರ ತಿಂಗಳಲ್ಲಿ ಸಮೀಕ್ಷೆ ಮಾಡಲಾಯಿತು.

**ಗ್ರಾಮ ಸಮೀಕ್ಷೆಯಿಂದ ಈ ಕೆಳಗಿನ ಅಂಶಗಳು ಹೊರಬಂದವು.**

| ಅ.ನಂ | ಚಟುವಟಿಕೆಗಳ ವಿವರ | ಗಂಡು | ಹೆಣ್ಣು | ಒಟ್ಟು |
|---|---|---|---|---|
| 01 | ಮನೆಗಳು | 6579 | 300 | 6879 |
| 02 | 18< ಒಳಗಿನ ಮಕ್ಕಳು 7498 | 7498 | 6268 | 13766 |
| 03 | ಜನನ ದಾಖಲಾತಿ ಹೊಂದಿದವರು | 7498 | 6268 | 13766 |
| 04 | 3< ಒಳಗಿನ ಮಕ್ಕಳು | 1500 | 1305 | 2805 |
| 05 | 4 ರಿಂದ 5 ವರ್ಷದ ಮಕ್ಕಳು | 1265 | 1112 | 2377 |
| 06 | 7 ರಿಂದ 14 ವರ್ಷದ ಮಕ್ಕಳು | 3259 | 2919 | 6178 |
| 07 | 15 ರಿಂದ 18 ವರ್ಷದ ಮಕ್ಕಳು | 1470 | 936 | 2406 |
| 08 | ದೈಹಿಕ ಅಂಗವಿಕಲ ಮಕ್ಕಳು | 43 | 38 | 81 |
| 09 | ಮಾನಸಿಕ ಅಸ್ತವೆಸ್ತ ಮಕ್ಕಳು | 07 | 17 | 34 |
| 10 | ಅಂಗನವಾಡಿ ಮಕ್ಕಳ ಸಂಖ್ಯೆ | 1140 | 969 | 2109 |
| 11 | ಅಂಗನವಾಡಿಯಲ್ಲಿ ಹಾಜರಿರುವ ಮಕ್ಕಳ ಸಂಖ್ಯೆ | 1033 | 935 | 1968 |
| 12 | ಪ್ರಾಥಮಿಕ ಶಾಲೆಯಲ್ಲಿ 7ರಿಂದ 14 ವರ್ಷದ ಮಕ್ಕಳು | 3083 | 2665 | 5748 |
| 13 | ಪ್ರೌಢಶಾಲೆಯಲ್ಲಿ 15ರಿಂದ 18 ವರ್ಷದ ಮಕ್ಕಳು | 943 | 506 | 1449 |
| 14 | ಬ್ರಿಡ್ಜ್ ಶಾಲೆಗೆ ಹೋಗುವವರು | 95 | 74 | 169 |
| 15 | ಶಾಲೆಯಿಂದ ದಾಖಲಾತಿ ಇಲ್ಲದ ಮಕ್ಕಳು | 15 | 19 | 34 |
| 16 | ಶಾಲೆ ಬಿಟ್ಟ ಮಕ್ಕಳು | 1166 | 1152 | 2318 |
| 17 | ಶಾಲೆ ದೂರ ಇರುವುದರಿಂದ | 207 | 193 | 400 |

| | | | | |
|---|---|---|---|---|
| 18 | ಶಾಲೆ ಕಾರ್ಯನಿರ್ವಹಿಸುತ್ತಿಲ್ಲ | 05 | 12 | 17 |
| 19 | ಪಾಲಕರ ವಲಸೆ | 117 | 93 | 210 |
| 20 | ಪಾಲಕರ ನಿರಾಸಕ್ತಿ | 755 | 770 | 1525 |
| 21 | ಒತ್ತಾಯ ಪೂರ್ವಕ ಬಾಲಕಾರ್ಮಿಕರು | 54 | 14 | 68 |
| 22 | ಬಾಲ್ಯ ವಿವಾಹ | 03 | 36 | 39 |
| 23 | ಋತುಮತಿಯಿಂದ ಶಾಲೆಯಿಂದ ಹೊರಗೆ | 00 | 01 | 01 |
| 24 | ಅಂಗವಿಕಲತೆಯಿಂದ ಶಾಲೆ ಬಿಟ್ಟಿದ್ದು | 25 | 38 | 63 |
| 25 | ಮನೆಕೆಲಸದಲ್ಲಿ ಮಕ್ಕಳು | 220 | 257 | 479 |
| 26 | ದಿನಕೂಲಿಯಲ್ಲಿ ಮಕ್ಕಳು | 212 | 123 | 335 |
| 27 | ಕೆಲಸವಿಲ್ಲದೆ ಶಾಲೆ ಬಿಟ್ಟಿದ್ದು | 733 | 777 | 1510 |

**ಸಮುದಾಯ ಸಭೆಗಳು**

ಒಟ್ಟು 25 ಸಭೆಗಳನ್ನು ಮಾಡಿ ಗಂ.790 ಹೆ.339 ಒಟ್ಟು 1129 ಜನರಲ್ಲಿ ಅಂಗನವಾಡಿ ಕಾರ್ಯಕರ್ತರು, ಶಾಲಾ ಶಿಕ್ಷಕರು, ಗ್ರಾಮ ಪಂಚಾಯಿತಿ ಸದಸ್ಯರು, ಆಶಾ ಕಾರ್ಯಕರ್ತೆಯರು, ಪಾಲಕರು, ಸ್ವ–ಸಹಾಯ ಸಂಘದ ಸದಸ್ಯರು ಪಾಲ್ಗೊಂಡಿದ್ದರು. ಸಭೆಯಲ್ಲಿ ಐ.ಎಲ್.ಪಿ ಯೋಜನೆ ಗುರಿ, ಉದ್ದೇಶಗಳು, ಶಾಲಾ ನಾಯಕತ್ವ ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ವ್ಯತ್ಯಾಸ, ಗುಣಮಟ್ಟದ ಶಿಕ್ಷಣ, ಶಾಲಾ ಸ್ವಚ್ಛತೆ, ಶಾಲೆಗೆ ಬೇಕಾಗಿರುವ ಮೂಲಭೂತ ಸೌಲಭ್ಯಗಳ ಶಾಲಾ ಕಾರ್ಯಕ್ರಮಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಶಾಲಾ ಹಾಜರಾತಿ, ಬಾಲ್ಯವಿವಾಹ, ಬಾಲಕಾರ್ಮಿಕತೆಯಿಂದಾಗುವ ದುಷ್ಪರಿಣಾಮಗಳು, ಮಕ್ಕಳ ಸ್ನೇಹಿ ಪಾಲಕ, ಶಿಕ್ಷಕ, ಗ್ರಾಮಪಂಚಾಯಿತಿ ಕುರಿತು ಮಾತನಾಡಲಾಯಿತು.

**ಅಂಗನವಾಡಿ ಕೇಂದ್ರಗಳ ವಿವರ ಸ್ಥಿತಿಗತಿ**

ಒಟ್ಟು 37 ಅಂಗನವಾಡಿ ಕೇಂದ್ರಗಳಲ್ಲಿ ಅಲ್ಲಿ ಮಕ್ಕಳ ದಾಖಲಾತಿ ಒಟ್ಟು ಗಂ.744 ಹೆ.795 ಒಟ್ಟು 1539 ಇದ್ದು ನಿಜವಾದ ಹಾಜರಾತಿ ಗಂ.297 ಹೆ. 236 ಒಟ್ಟು 533 ಮಕ್ಕಳು ಹಾಜರಾತಿಯಲ್ಲಿರುವುದು ಕಂಡುಬಂದಿದೆ.

ಅದರಂತೆ ಒಟ್ಟು 32 ಪ್ರಾಥಮಿಕ ಶಾಲೆಗಳಲ್ಲಿ ಗಂ.2495 ಹೆ.2452 ಒಟ್ಟು 4947 ದಾಖಲಾತಿ ಇದ್ದು, ಹಾಜರಾತಿ ಪ್ರಕಾರ ಗಂ.1751 ಹೆ.1723 ಒಟ್ಟು 3474 ಇರುತ್ತಾರೆ.

ಈ ಮೇಲಿನಂತೆ ಅಂಗನವಾಡಿ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಹಾಜರಾತಿ ಇದ್ದು ಇಲ್ಲಿ ಮಕ್ಕಳ ಗೈರು ಹಾಜರಿಗೆ ಪ್ರಮುಖ ಕಾರಣಗಳೆಂದರೆ ಶಿಕ್ಷಕರ ಗೈರು ಹಾಜರಿ, ಶಾಲೆಯೂ ಆಕರ್ಷಕ ಮಕ್ಕಳ ಸ್ನೇಹಿಯಾಗಿರದೇ, ವೇಳಾಪತ್ರಿಕೆ ಪಾಲಿಸದ ಶಿಕ್ಷಕರು, ಸಮಯಪಾಲನೆ ಮಾಡದ ಶಿಕ್ಷಕರು, ಸಮುದಾಯದವರು ಶಾಲೆಯನ್ನು ಆಲಕ್ಷಿಸಿದ್ದು, ಎಸ್,ಡಿ,ಎಮ್,ಸಿ ಸಮರ್ಪಕ ಕಾರ್ಯ ನಿರ್ವಹಿಸದೇ ಇರುವುದು, ವಲಸೆ, ಪಾಲಕರ ನಿರಾಸಕ್ತಿ, ಕಾರಣಗಳಾಗಿವೆ. ಇವೆಲ್ಲ ಸಮಸ್ಯೆಗಳ ಹಲವು ಸಭೆಗಳನ್ನು ತರಬೇತಿ ನೀಡಿ ಪರಿಹರಿಸಲು ಕಾರ್ಯ ನಿರ್ವಹಿಸುತ್ತಿದ್ದೇವೆ.

45 ಜನ ಅಂಗನವಾಡಿ ಕಾರ್ಯಕರ್ತರು ಹಾಗೂ ಮೇಲ್ವಿಚಾರಕರಿಗೆ ಒಂದು ದಿನ ತರಬೇತಿ ನೀಡಿ, ಅದರಲ್ಲಿ ಐ,ಸಿಪಿ,ಎಸ್ ಮಕ್ಕಳ ನ್ಯಾಯ ಕಾಯಿದೆ, ಪೋಕ್ಸೊ ಆರ್,ಟಿ,ಇ ಮಕ್ಕಳ ಸಹಾಯವಾಣಿ 1098 ಐ.ಎಲ್.ಪಿ ಯೋಜನೆಯ ಗುರಿ ಉದ್ದೇಶಗಳ ಬಗ್ಗೆ ತಿಳಿಸಲಾಯಿತು.

ಕಾರ್ಯಕ್ಷೇತ್ರದಲ್ಲಿ 37 ಅಂಗನವಾಡಿ ಮಟ್ಟದ ಮೇಲ್ವಿಚಾರಣಾ ಸಮಿತಿ ಸದಸ್ಯರಿಗೆ ಸಭೆ ಮಾಡಲಾಯಿತು. ಅದರಲ್ಲಿ ಗಂ.144 ಹೆ.356 ಒಟ್ಟು 500 ಜನರು ಪಾಲ್ಗೊಂಡಿದ್ದರು. ವಿದ್ಯುತ್ ಸಮಸ್ಯೆ, ಕುಡಿಯುವ ನೀರು, ಕಟ್ಟಡ ALMSC ಹಾಗೂ ಅಂಗನವಾಡಿ ಕಾರ್ಯಕರ್ತರ ಪಾತ್ರ ಜವಾಬ್ದಾರಿ ಹಾಗೂ ಗ್ರಾಮ ಪಂಚಾಯಿತಿ ಪಾತ್ರ ಕುರಿತು ತಿಳಿಸಲಾಯಿತು.

**ಎಸ್.ಡಿ.ಎಮ್.ಸಿ ಅರಿವು ಕಾರ್ಯಕ್ರಮ**

5 ಎಸ್.ಡಿ.ಎಮ್.ಸಿ ಸಭೆಗಳನ್ನು ಮಾಡಿ ಸದಸ್ಯರ ಪಾತ್ರ, ಕಾರ್ಯಕ್ರಮ, ಮಕ್ಕಳ ದೈಹಿಕ ಬೆಳವಣಿಗೆ, ಮಕ್ಕಳನ್ನು ಶಾಲೆಗೆ ಕಳಿಸುವುದು, ಮಕ್ಕಳ ಅಭಿವೃದ್ಧಿಯಲ್ಲಿ ಶಿಕ್ಷಕರ ಮತ್ತು ಪಾಲಕರ ಪಾತ್ರ, ಶಾಲಾ ಸೌಲಭ್ಯಗಳ ಕುರಿತು ಪಾಲ್ಗೊಂಡ ಗಂ.62 ಹೆ.47 ಒಟ್ಟು 109 ಜನ ಸದಸ್ಯರು ಭಾಗವಹಿಸಿದರು.

**ಮಕ್ಕಳ ಹಕ್ಕುಗಳ ಕ್ಲಬ್**

ಐದು ಮಕ್ಕಳ ಸಂಘಗಳ ಸಭೆ ಮಾಡಲಾಗಿದ್ದು, ಈ ಸಭೆಯಲ್ಲಿ ಐ.ಎಲ್.ಪಿ ಯೋಜನೆಯ ಗುರಿ ಉದ್ದೇಶಗಳು ಮಕ್ಕಳ ಕ್ಲಬ್ ನ ಚಟುವಟಿಕೆಗಳ ರಚನೆ, ಸದಸ್ಯರ ಕರ್ತವ್ಯಗಳು 72.ಗಂ 59.ಹೆ ಒಟ್ಟು 131 ಜನರಿಗೆ ತಿಳಿಸಲಾಯಿತು.

**ಮಕ್ಕಳ ಹಕ್ಕುಗಳ ಒಡಂಬಡಿಕೆ ದಿನ**

20 ನವ್ಹೆಂಬರ 2015 ರಂದು ದೇವರಹಿಪ್ಪರಗಿಯ ಶ್ರೀ ಸಿದ್ದೇಶ್ವರ ಪ್ರೌಢಶಾಲೆಯಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆ ದಿನ ಆಚರಿಸಲಾಯಿತು. ಸಿಂದಗಿ ತಹಸಿಲ್ದಾರ, ಮಾಜಿ CWC ಅಧ್ಯಕ್ಷರು, ಶಿಕ್ಷಣ ವಿಜ್ಞಾನ ಪರಿವಿಕ್ಷಕರು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಉಜ್ವಲ ಸಂಸ್ಥೆಯ ನಿರ್ದೇಶಕರು, ಮಕ್ಕಳ ಸಹಾಯವಾಣಿಯ ಸಂಯೋಜಕರು, ಸಿದ್ದೇಶ್ವರ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಪಾಲ್ಗೊಂಡಿದ್ದರು.

ಇಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆ ದಿನಾಚರಣೆ ಮಹತ್ವ, ಪೋಕ್ಸೊ, ಮಕ್ಕಳ ನ್ಯಾಯ ಕಾಯಿದೆ, ಬಾಲ್ಯವಿವಾಹ, ಮಕ್ಕಳ ಸಹಾಯವಾಣಿ 1098 ವಿಚಾರಗಳನ್ನು ವೇದಿಕೆಯಲ್ಲಿ ತಜ್ಞರು ಮಾತನಾಡಿದರು. ಇಲ್ಲಿ 790 ವಿದ್ಯಾರ್ಥಿಗಳು ಹಾಗೂ 6 ಶಾಲೆಯ ಶಿಕ್ಷಕರು ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದಲ್ಲಿ 20 ನವ್ಹೆಂಬರ 2015 ರಲ್ಲಿ ಮುಖ್ಯಮಂತ್ರಿಗಳೊಂದಿಗೆ ವಿಧಾನಸೌಧದಲ್ಲಿ ಮಾತನಾಡಿದ ಮಗುವಿಗೆ ಸನ್ಮಾನಿಸಲಾಯಿತು.

**ನಮ್ಮೂರು ಯೋಜನೆ ವಿಜಯಪುರ**

ಸಮುದಾಯ ನಾಯಕತ್ವದಲ್ಲಿ ಜಿಲ್ಲೆಯ ಸಿಂದಗಿ ತಾಲೂಕಿನ ದೇವರಹಿಪ್ಪರಗಿ ಪಡಗಾನೂರ ಮಧ್ಯದಲ್ಲಿ 218 ಎನ್.ಎಚ್ ಪಕ್ಕದಲ್ಲಿ ನಮ್ಮ ಮಕ್ಕಳ ಧಾಮ ಯೋಜನೆಯನ್ನು 8 ವರ್ಷಗಳಿಂದ ಪ್ರಾರಂಭಿಸಲಾಗಿದ್ದು, ಈಗ ನಮ್ಮೂರು (ಸಮುದಾಯದ ನಾಯಕತ್ವದ) ಯೊಜನೆಯನ್ನು 2012 ರಲ್ಲಿ ಪ್ರಾರಂಭಿಸಿದ್ದು, ಈಗ ಮುಂದಿನ ತಾಲೂಕೆಂದೇ ದೇವರಹಿಪ್ಪರಗಿಯನ್ನು ಕರ್ನಾಟಕಸರ್ಕಾರ ಪರಿಗಣಿಸಲಾಗಿದೆ. ಈ ತಾಲೂಕಿನ ಅಭಿವೃದ್ಧಿಗಾಗಿ ಉಜ್ವಲ ಸಂಸ್ಥೆಯ ನಮ್ಮೂರು ಯೋಜನೆ ರೂಪಿಸಿ ಮುಖ್ಯ ಮೂರು ಅಭಿವೃದ್ಧಿ ವಿಭಾಗಗಳನ್ನು ಕೆಳಗಿನಂತೆ ರಚಿಸಲಾಗಿದೆ.

- ಅಪಾಯದಂಚಿನಲ್ಲಿರುವ ಮಕ್ಕಳ ರಕ್ಷಣೆಗಾಗಿ ನಮ್ಮ ಮಕ್ಕಳ ಧಾಮ.
- ಮಾನವ ಸಂಪನ್ಮೂಲ ಅಭಿವೃದ್ಧಿ ತರಬೇತಿ ಕೇಂದ್ರ.
- ಸಹಜ ಸುಸ್ಥಿರ ಕೃಷಿ ಪ್ರಾತ್ಯಕ್ಷಿಕೆ ತಾಣ.

**I) ನಮ್ಮ ಮಕ್ಕಳ ಧಾಮ.**

ಧಾಮದಲ್ಲಿ 13 ಹೆಚ್.ಐ.ವಿ ಸೋಂಕಿತ ಮಕ್ಕಳಿದ್ದು, ಅವರಿಗೆ ಆರೋಗ್ಯ, ಪೌಷ್ಟಿಕ ಆಹಾರ, ಶಿಕ್ಷಣ, ವಸತಿ, ರಕ್ಷಣೆ ಹಾಗೂ ಮನೋಸಾಮಾಜಿಕ ಬೆಂಬಲಗಳನ್ನು ನೀಡಿ, ಮನೆಯ ವಾತಾವರಣದಲ್ಲಿ ಪಾಲಕರ ಪ್ರೀತಿ ಒದಗಿಸಲಾಗುತ್ತದೆ.

**ಆರೋಗ್ಯ:-** ವಿಜಯಪುರ ಹಾಗೂ ಸಿಂದಗಿ ತಾಲೂಕಿನ ಎ.ಆರ್.ಟಿ ಕೇಂದ್ರಗಳಿಂದ ಮಕ್ಕಳಿಗೆ ಉಚಿತ ಔಷಧ ನೀಡಲಾಗುತ್ತಿದೆ. ಯಾಳವಾರ ಗ್ರಾಮದ ಆನಂದ ಮೆಡಿಕಲ್ ಮತ್ತು ಜನರಲ್ ಸ್ಟೋರ್‌ನವರು ಸಾಮಾನ್ಯ ಖಾಯಿಲೆಗಳಿಗೆ ಉಚಿತ ಔಷಧ ನೀಡುತ್ತಿದ್ದಾರೆ. ದೇವರಹಿಪ್ಪರಗಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

9 ಮಕ್ಕಳು ಮಾತ್ರ ಜಿಲ್ಲಾ ಆಸ್ಪತ್ರೆಯಲ್ಲಿ ಕಣ್ಣುನೋವು, ಎದೆನೋವು, ಕಾಲಿಗೆ ಗಾಯ, ಕಿವಿನೋವು, ಕೆಮ್ಮು, ಮೈ ಕೈ ನೋವಿನ ಸಲುವಾಗಿ ದಾಖಲಾಗಿ ಸೇವೆ ಪಡೆದಿದ್ದಾರೆ.

ಒಂದು ಮಗುವನ್ನು ಬಿಟ್ಟು ಉಳಿದ 12 ಮಕ್ಕಳು ತೂಕ, ಎತ್ತರ, ಎದೆಯ ಸುತ್ತಳತೆ, ಹೆಚ್ಚಾಗಿದೆ. ಅದರಂತೆ ಸಿ ಡಿ 4 ಕ್ಕೂ ಹೆಚ್ಚಾಗಿದೆ. ತಪ್ಪದೆ ಮಕ್ಕಳು ಸಮಯಕ್ಕೆ ಸರಿಯಾಗಿ ಮಾತ್ರೆ ತೆಗೆದುಕೊಳ್ಳುತ್ತಾರೆ.

**ಆಹಾರ:–** ಈ ವಿಷಯದಲ್ಲಿ ದಾನಿಗಳು ಅಕ್ಕಿ, ಗೋಧಿ, ಜೋಳ, ಮಸಾಲಿ ಸಾಮಗ್ರಿ, ದ್ವಿದಳ ದಾನ್ಯಗಳು, ಅಡುಗೆ ಪದಾರ್ಥ, ಎಣ್ಣೆ, ಹಣ್ಣು, ತಿಂಡಿ ತಿನಿಸುಗಳು, ಮೊಟ್ಟೆ, ತರಕಾರಿಗಳನ್ನು ಸೇರಿಸಿ **ಒಟ್ಟು 1,24,910/– (ಒಂದು ಲಕ್ಷ ಇಪ್ಪತ್ತನಾಲ್ಕು ಸಾವಿರದಾ ಒಂಬತ್ತ ನೂರಾ ಹತ್ತು) ರೂಪಾಯಿಗಳಷ್ಟು ಸ್ಥಳೀಯ ಸಂಪನ್ಮೂಲ ಹಾಗೂ ವ್ಯಕ್ತಿ, ದಾನಿಗಳು, ವ್ಯಾಪಾರಿಗಳು, ತರಕಾರಿ ಅಧಿಕಾರಿಗಳಿಂದ ಸಂಗ್ರಹಿಸಲಾಗಿದೆ.**

ಮಕ್ಕಳಿಗೆ ಆಹಾರ ವಿತರಣೆಗಾಗಿ ಮಕ್ಕಳಿಂದಲೇ ತಯಾರಿಸಿದ ವೇಳಾ ಪಟ್ಟಿಯಂತೆ ಆಹಾರ ವಿತರಿಸಲಾಗುತ್ತಿದೆ. ಇಲ್ಲಿಯೇ ಬೆಳೆದ ಪಪ್ಪಾಯಿ, ನುಗ್ಗೆ, ಚಿಕ್ಕು, ಪೇರು, ಸೀತಾಫಲ, ಅಂಜೂರ, ಕರಿಬೇವು, ಟೊಮೆಟೊ, ತಿಪ್ಪರಿಕಾಯಿ, ಹಾಗಲಕಾಯಿ ಮಕ್ಕಳೇ ಬೆಳೆದು ಖುಷಿಯಿಂದ ಸೇವಿಸುತ್ತಿದ್ದಾರೆ. ಪ್ರತಿ ಅಮವಾಸ್ಸೆಗೊಮ್ಮೆ ಧಾಮಕ್ಕೆ ಪಡಗಾನೂರ ಗ್ರಾಮದ ಶ್ರೀ ಲಗಮವ್ವ ದೇವಸ್ಥಾನದಿಂದ ಊಟದ ವ್ಯವಸ್ಥೆ ಮಾಡುತ್ತಾರೆ. ದೇವರಹಿಪ್ಪರಗಿ ಶ್ರೀ ಬಾಬು ದೇವಣಗಾಂವ ಅವರು ವರ್ಷವಿಡಿ ಮೊಟ್ಟೆ ಉಚಿತವಾಗಿ ಸರಬರಾಜು ಮಾಡುತ್ತಾರೆ.

**ಶಿಕ್ಷಣ:–**ಎಲ್ಲಾ ಮಕ್ಕಳು ಮುಖ್ಯವಾಹಿನಿಯಲ್ಲಿ ಶಿಕ್ಷಣ ಪಡೆಯುತ್ತಾರೆ. 2 ನೇ ತರಗತಿಯಿಂದ ಪಿಯುಸಿ ಮೊದಲನೆ ವರ್ಷದಲ್ಲಿ ಕಲಿಯುತ್ತಿದ್ದಾರೆ. ವಾಸುದೇವ ತೋಳಬಂದಿ, ಸಾಗರ ಘಾಟಗೆ ಮಕ್ಕಳಿಗೆ ವಿಶೇಷ ವರ್ಗಗಳ ಮುಖಾಂತರ ವಿಷಯ ಬೋಧನೆ, ನೈತಿಕತೆ, ಶಿಸ್ತು, ಸ್ವಚ್ಛತೆ, ನೀರಿನ ಬಳಕೆ, ಆಹಾರದ ಸದ್ಬಳಕೆ, ಪರಿಸರ ಶಿಕ್ಷಣದ ಕುರಿತು ಮಾಡುತ್ತಾರೆ. ಮಕ್ಕಳಿಗೆ ಕಲಿಯಲು ಅವಶ್ಯವಿರುವ ವಿವಿಧ ಚಾರ್ಟಗಳು, ನಲಿಕಲಿಗೆ ಸಂಬಂಧಿಸಿದ ಸಾಮಗ್ರಿಗಳು ಸದುಪಯೋಗವಾಗುತ್ತಿವೆ. ಪ್ರತಿ ತಿಂಗಳು ಮಕ್ಕಳಿಗೆ ಕಿರುಪರೀಕ್ಷೆ ಧಾಮದಲ್ಲಿ ಶಿಕ್ಷಕರು ನಡೆಸುತ್ತಿದ್ದಾರೆ. ಓದಲು ಪ್ರತ್ಯೇಕ ಗ್ರಂಥಾಲಯವಿದ್ದು, ಮಕ್ಕಳು ತಮಗೆ ಇಷ್ಟವಾದ ಪುಸ್ತಕ ತಾವೇ ಪಡೆದುಕೊಂಡು ಓದುತ್ತಾರೆ. ವಾಸುದೇವ ತೋಳಬಂದಿ ಹಾಗೂ ಮಕ್ಕಳ ಹಕ್ಕುಗಳ ಸಂಸ್ಥೆ (ಸಿಆರ್‌ಟಿ) ನೀಡಿರುವ ವಿಜ್ಞಾನ, ಪರಿಸರ, ಆರೋಗ್ಯ, ಹಾಡು, ಕಥೆ, ನಾಟಕ, ಆದರ್ಶ ವ್ಯಕ್ತಿಗಳು ಹೀಗೆ 38 ರೀತಿಯ 950 ಕ್ಕೂ ಹೆಚ್ಚು ಪುಸ್ತಕಗಳನ್ನು ಕಾಣಬಹುದಾಗಿದೆ.

**ಮನೋಸಾಮಾಜಿಕ ಬೆಂಬಲ:–**ಪ್ರತಿ ರವಿವಾರದಂದು ಸಾಯಂಕಾಲ 6 ರಿಂದ 8 ರವರೆಗೆ ವ್ಯಕ್ತಿತ್ವ–ವಿಕಸನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ಇದನ್ನು ಸಂಪೂರ್ಣವಾಗಿ ಮಕ್ಕಳೇ ನಡೆಸಿ ಕೊಡುತ್ತಿದ್ದಾರೆ. ಈ ಕಾರ್ಯಕ್ರಮದಲ್ಲಿ ಆದರ್ಶ ವ್ಯಕ್ತಿಗಳ ಜೀವನ ಚರಿತ್ರೆ, ಹಾಡು, ನೃತ್ಯ, ನಾಟಕಗಳ ಮುಖಾಂತರ ತಮ್ಮ ಕಲೆಗಳನ್ನು ಮಕ್ಕಳು ಹೊರ ಹಾಕುತ್ತಿದ್ದಾರೆ. ಪ್ರತಿವಾರ ಆಪ್ತಮಿತ್ರ ಪೆಟ್ಟಿಗೆಯಲ್ಲಿ ಮಕ್ಕಳು ಹಾಕಿದ ಚೀಟಿಗಳನ್ನು ಹೊರತೆಗೆದು ಕಾನುನೂ ಮಂತ್ರಿಯಾದ ಮಗು ಈ ಸಮಸ್ಯೆಗಳಿಗೆ ಎಲ್ಲ ಮಕ್ಕಳೊಂದಿಗೆ ಕುಳಿತು ಪರಿಹಾರ ಕಂಡುಕೊಳ್ಳುತ್ತಾರೆ.

ಒಳಾಂಗಣ ಆಟಕ್ಕಾಗಿ ಚೆಸ್, ಕೇರಂ ಬೋರ್ಡ್, ಗೋಟಿ ಪ್ಲೇಟ್, ಬಿಲ್ಡಿಂಗ್ ಬಾಕ್ಸ್, ಪ್ರಾಣಿ & ಪಕ್ಷಿಗಳ ಗೊಂಬೆಗಳ ವಿವಿಧ ಚಿತ್ರಪಟಗಳು, ಹಾವು ಏಣಿ ಆಟ ಆಡುತ್ತಾರೆ.

ಹೊರಾಂಗಣದಲ್ಲಿ ಕಬ್ಬಡ್ಡಿ, ಕ್ರಿಕೇಟ, ಲಗೋರಿ, ಸ್ಕಿಪಿಂಗ್, ವ್ಹಾಲಿಬಾಲ್, ರಿಂಗ್, ಕಬ್ಬಿಣ ಗುಂಡು ಎಸೆತ, ಟೆನಿಸ್ ಆಟಗಳನ್ನು ಆಡುತ್ತಾರೆ.

ಗುಲ್ಬರ್ಗಾದಲ್ಲಿ ಕೆ,ಹೆಚ್,ಪಿ,ಟಿ ಅವರು ಸಂಘಟಿಸಿದ ವಲಯ ಮಟ್ಟದ ಕ್ರೀಡಾ ಕೂಟದಲ್ಲಿ ಸುನೀಲ ಹಾಗೂ ಜಕ್ಕಪ್ಪ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ 400 ಮೀ. ರನ್ನಿಂಗ್‌ದಲ್ಲಿ ದ್ವಿತೀಯ ಸ್ಥಾನ ಪಡೆದರು.

18/08/2015 ರಂದು ಬೆಂಗಳೂರಿನ ಪಬ್ಲಿಕ್ ಟಿವ್ಹಿ ಸ್ಟುಡಿಯೊದಲ್ಲಿ ಬೆಳಕು ಕಾರ್ಯಕ್ರಮದಲ್ಲಿ ಎರಡು ಮಕ್ಕಳು ಪಾಲ್ಗೊಂಡಿದ್ದರು. **"ಧಾಮದಲ್ಲಿ"** ಮಂತ್ರಿ ಮಂಡಳ ತಾವೇ ರಚಿಸಿಕೊಂಡು ತಿಂಗಳಿಗೊಮ್ಮೆ ಮಂತ್ರಿ ಮಂಡಳ ಸಭೆ ಕರೆದು ಮಕ್ಕಳ ಸಮಸ್ಯೆಗಳ ಹಾಗೂ ಅಭಿವೃದ್ಧಿ ಬಗ್ಗೆ ಚರ್ಚಿಸಿ ನಿರ್ಣಯ ಕೈಕೊಳ್ಳುತ್ತಾರೆ.

**ರಕ್ಷಣೆ:**–ಮಕ್ಕಳ ರಕ್ಷಣೆ 6 ಕೋಣೆಗಳಿದ್ದು, ಸುಂದರವಾದ ಕಟ್ಟಡ ಮಕ್ಕಳೇ ನಿರ್ಮಿಸಿದ ಕೈತೋಟ ಮಕ್ಕಳನ್ನು ಸದಾ ನೋಡಿಕೊಳ್ಳಲು ಇಬ್ಬರು ಸಿಬ್ಬಂದಿಗಳಿದ್ದಾರೆ. ಉಜ್ವಲ ಸಂಸ್ಥೆಯ ಮುಖ್ಯಸ್ಥರಾದ ವಾಸುದೇವ ತೋಳಬಂದಿ ಸರ್ ಅವರು ವಾರದಲ್ಲಿ ಮೂರು ದಿನ ಬಂದು ಮಕ್ಕಳೊಂದಿಗೆ ವಾಸಿಸುತ್ತಾರೆ. ಮಕ್ಕಳ ಧಾಮದ ರಕ್ಷಣೆಗಾಗಿ ನಾಯಿ ಹಾಗೂ ಬೆಕ್ಕು ಸಾಕಲಾಗಿದೆ. ಬೆಂಗಳೂರಿನ ಶ್ರೀ ಪಂಚಾಕ್ಷರಿ ಪಾಟೀಲ ಐ ಟಿ ಇಂಜಿನಿಯರ್ ಅವರು ದಿ. 22/10/2015 ರಂದು 3 ಸೋಲಾರ್ ಲೈಟ್ ವ್ಯವಸ್ಥೆ ಮಾಡಿ ಮಕ್ಕಳಿಗೆ ಅನುಕೂಲ ಮಾಡಿ ಕೊಟ್ಟಿದ್ದಾರೆ. ದಾನಿಗಳು ಬೇಸಿಗೆಯಲ್ಲಿ 17 ಟ್ಯಾಂಕರ್ ನೀರು ಕೊಟ್ಟು ನೀರಿನ ಸಮಸ್ಯೆ ಪರಿಹರಿಸಿದ್ದಾರೆ.

**ವಸತಿ:**–ಎರಡು ಎಕರೆ ಜಾಗೆಯಲ್ಲಿ ವಸತಿ ಹಾಗೂ ಗಿಡಗಳನ್ನು ಹಚ್ಚಲಾಗಿದೆ. ಪ್ರತ್ಯೇಕ ವಿಶ್ರಾಂತಿ ಕೋಣೆ, ಸಭಾಂಗಣ, ಗ್ರಂಥಾಲಯ, ಊಟದ ಮನೆ, ಹಾಗೂ ಅಡುಗೆ ಮನೆ, ಸ್ಟೋರ್‌ರೂಮ್, ಕಾರ್ಯಾಲಯ ಮಕ್ಕಳಿಗೆ ಆಡಲು ವಿಶಾಲವಾದ ಮೈದಾನವಿದೆ. ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಮತ್ತು ಸ್ನಾನ ಗೃಹ ನಿರ್ಮಿಸಲಾಗಿದೆ.

## II) ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ

ದೇವರಹಿಪ್ಪರಗಿ ಸುತ್ತಲಿನ ಗ್ರಾಮದವರ ಅಭಿವೃದ್ಧಿಗೋಸ್ಕರ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮುದಾಯದ ಸಹಯೋಗದೊಂದಿಗೆ 312 ಜನರಿಗೆ ತರಬೇತಿ ನೀಡಲಾಗಿದೆ. ಪರಿಸರ ಅಭಿವೃದ್ಧಿ ಸುಸ್ಥಿರ ಕೃಷಿ ಶೈಕ್ಷಣಿಕವಾಗಿ ಬೋಧನಾ ಕೌಶಲ್ಯ, ಶೀಘ್ರ ಕಲಿಕೆ ಅಂಗನವಾಡಿ ಶಿಕ್ಷಕಿಯರ ಸಾಮರ್ಥ್ಯಾಭಿವೃದ್ಧಿ, ನಾಯಕತ್ವ ತರಬೇತಿ ನೀಡಲಾಗುತ್ತಿದೆ. ವಿವಿಧ ಸಂಘ ಸಂಸ್ಥೆಯವರು ಜನಾಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಲು ಸಭಾಂಗಣ ಉಚಿತವಾಗಿ ಒದಗಿಸಲಾಗುತ್ತಿದೆ.

## III) ಸಹಜ ಸುಸ್ಥಿರ ಪ್ರಾತ್ಯಕ್ಷಿಕೆ ತಾಣ

ಇಲ್ಲಿ ನೈಸರ್ಗಿಕವಾಗಿ ಸಹಜ ಸುಸ್ಥಿರ ಕೃಷಿಯನ್ನು ಒಂದುವರೆ ಎಕರೆ ಜಾಗದಲ್ಲಿ ಅಳವಡಿಸಲಾಗಿದೆ. ಮಳೆನೀರು ಮಕ್ಕಳ ಸಿಬ್ಬಂದಿಗಳ ಸ್ನಾನದ ಕೈ ತೊಳೆದ ನೀರು ಗಿಡಗಳಿಗೆ ಪುನರ್‌ಬಳಕೆ ಮಾಡಿಕೊಳ್ಳಲಾಗುತ್ತಿದೆ. ಮಳೆ ನೀರಿನ ಒಂದು ಹನಿ ನೀರು ಕೂಡಾ ಹಾಳಾಗದಂತೆ ಘಟ್ಟ ಪದ್ಧತಿ ಕೃಷಿ ಅಳವಡಿಸಲಾಗಿದೆ. ಫುಕೊಉಕೋ ಹಾಗೂ ನಮ್ಮ ದೇಶದ ಸುಭಾಷ ಪಾಳೇಕರ ಸಾವಯವ ಕೃಷಿ ಅಳವಡಿಸಲಾಗಿದೆ. ಈ ಸಣ್ಣ ಜಾಗದಲ್ಲಿ ಸಾವಯವ ಪ್ರಯೋಗ ಮಾಡಲಾಗುತ್ತಿದೆ. ಕಲ್ಲಿನ ತಳಹದಿ ಇದ್ದರೂ 325 ಗಿಡಗಳು ಇಲ್ಲಿ ಜೀವಂತವಾಗಿವೆ. 120 ಪಾಕೀಟ್‌ಲ್ಲಿ ಮಣ್ಣು ಹಾಕಿ ವಿವಿಧ ಗಿಡಗಳ ಬೀಜ ಹಾಕಿ ಸಸಿ ತಯಾರಿಕೆಗೆ ಹಾಕಲಾಯಿತು.

ಇಲ್ಲಿ ಮಾವು 34, ಚಿಕ್ಕು 16, ಸೀತಾಫಲ 34, ರಾಮಫಲ್ 2, ಬೆಟ್ಟದ ನೆಲ್ಲಿ 2, ಪೇರು 17, ಪಪ್ಪಾಯಿ 13, ಬಾಳೆಹಣ್ಣು 23, ದಾಳಿಂಬೆ 8, ಸೇಬು 2, ನಿಂಬೆಹಣ್ಣು 8, ಅಂಜೂರ 4, ನೇರಳೆ ಹಣ್ಣು 3, ಮೋಸಂಬಿ 5, ಹಲಸಿನ ಹಣ್ಣು 1, ಇಲಾಚಿ ಹಣ್ಣು 2, ಬಾರಿಹಣ್ಣಿನಗಿಡ 13, ಕಿವಿ 2, ಬದಾಮಿ 2, ತೆಂಗಿನಗಿಡ 1, ನುಗ್ಗೆಕಾಯಿ 26, ಸಿಮೊರೋಭಾ 16, ಹುಣಸೆಗಿಡ 13, ಕರಿಬೇವು 9, ಬೇವಿನಗಿಡ 3, ಸಾಗವಾಣಿ 2, ದತ್ತಾತ್ರೇಯ ಗಿಡ 1, ನೆರಳಿನಗಿಡ 8, ಸುಬಾಬುಲ್ 5, ಕಾಡುಬೇವು 1, ಗುಲಾಬಿ 4, ಕಣಗಿಲು 3, ಪೇಪರ ಹೂವಿನ ಗಿಡ 7, ದಾಸವಾಳ 2, ಬ್ರಹ್ಮಕಮಲ 3, ಪಾರಿಜಾತ 1, ದೊಡ್ಡ ಹಳದಿ ಹೂವಿನಗಿಡ 1, ರಸನಾಬಳ್ಳಿ 2, ಕರ್ಜೂರ ಗಿಡ 2, ಶೋ ಗಿಡಗಳು 2, ಟೀ ಸಸ್ಯ 4.

**ದಾನಿಗಳಿಂದ ದೇಣಿಗೆ:–1)**7/6/2015 ರಂದು ಸಿಂದಗಿ ಮಾಜಿ ಶಾಶಕರಾದ ಶರಣಪ್ಪ ಸುಣಗಾರ ಇವರ ತಂದೆ ಭಿಮಶ್ಯಾ ಸುಣಗಾರ ಇವರ ಪುಣ್ಯತಿಥಿ ಅಂಗವಾಗಿ ಧಾಮಕ್ಕೆ 11000/– (ಹನ್ನೊಂದು ಸಾವಿರ) ರೂ. ದೇಣಿಗೆ ನೀಡಿದರು. 2) 9/8/2015 ರಂದು ದೇವರಹಿಪ್ಪರಗಿಯಲ್ಲಿ ನವನಿರ್ಮಾಣ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘದ ಉದ್ಘಾಟನಾ ಕರ್ಯಕ್ರಮದಲ್ಲಿ ಧಾಮಕ್ಕೆ 11000/– (ಹನ್ನೊಂದು ಸಾವಿರ ರೂ. ಚೆಕ್) ನೀಡಿದರು. 3) ಆರೋಗ್ಯಕ್ಕಾಗಿ ಆನಂದ ಮೆಡಿಕಲ್ ಯಾಳವಾರ ಅವರು ಅಂದಾಜು 5038/–(ಐವತ್ತು ಸಾವಿರದಾ ಮೂವತ್ತೆಂಟು ರೂ.) ಮೌಲ್ಯದ

ಔಷಧ ನೀಡಿದ್ದಾರೆ. 4) ಆಹಾರ ಧಾನ್ಯರೂಪದಲ್ಲಿ ತಿಂಡಿ ಪದಾರ್ಥಗಳ ರೂಪದಲ್ಲಿ 1,24,91./–(ಒಂದು ಲಕ್ಷ ಇಪ್ಪತ್ತು ನಾಲ್ಕು ಸಾವಿರದಾ ತೊಂಬತ್ತೊಂದು ರೂ.) ಮೌಲ್ಯದ ದೇಣಿಗೆ ರೂಪದಲ್ಲಿ ಬಂದಿದೆ. 5) ಶೈಕ್ಷಣಿಕ ಸಾಮಗ್ರಿ ರೂಪದಲ್ಲಿ ನೀಡಿದ ದೇಣಿಗೆ ಅಂದಾಜು ಮೌಲ್ಯ 12,499/–(ಹನ್ನೆರಡು ಸಾವಿರದಾ ನಾಲ್ಕು ನೂರಾ ತೊಂಬತ್ತರೊಂಬತ್ತು ರೂ.) 6) ಮನೋ ಸಾಮಾಜಿಕ ಬೆಂಬಲಕ್ಕೆ ಸಾಮಗ್ರಿಗಳ ರೂಪದಲ್ಲಿ ನೀಡಿದ ದೇಣಿಗೆ 3050/–( ಮೂವತ್ತು ಸಾವಿರದಾ ಐವತ್ತು ರೂ.) 7) ರಕ್ಷಣೆ ಸಾಮಗ್ರಿ ರೂಪದಲ್ಲಿ ನೀಡಿದ ದೇಣಿಗೆ 48,360/–(ನಲವತ್ತೆಂಟು ಸಾವಿರದಾ ಮೂರು ನೂರಾ ಅರವತ್ತು ರೂ.) 8) ಬಟ್ಟೆಯ ರೂಪದಲ್ಲಿ ಮೌಲ್ಯ 23,600/–(ಇಪ್ಪತ್ತಮೂರು ಸಾವಿರದಾ ಆರು ನೂರು ರೂ.) 9) 10 ಎಪ್ರಿಲ್ 2015 ರಂದು 9,834 /– (ಒಂಬತ್ತು ಸಾವಿರದಾ ಎಂಟು ನೂರಾ ಮುವತ್ನಾಲ್ಕು ರೂ.) 2500 ಮೌಲ್ಯದ ಸಾಮಗ್ರಿ ಸಂಗ್ರಹಿಸಲಾಯಿತು.

ಮೇಲಿನ ಎಲ್ಲ ವಸ್ತುಗಳನ್ನು ಕ್ರೋಢಿಕರಿಸಿದಾಗ ಹಣದ ರೂಪದಲ್ಲಿ ದೇಣಿಗೆ 2,17,457/–(ಎರಡು ಲಕ್ಷ ಹದಿನೇಳು ಸಾವಿರದಾ ನಾಲ್ಕು ನೂರಾ ಐವತ್ತೇಳು ರೂ.) ಸಂಗ್ರಹಿಸಲಾಯಿತು. **ಒಟ್ಟು ಒಂದು ವರ್ಷದಲ್ಲಿ ದಾನಿಗಳಿಂದ ವಿವಿಧ ರೂಪಗಳಿಂದ ಪಡೆದ ಒಟ್ಟು ದೇಣಿಗೆ ಹಣ 3,64,066/–(ಮೂರು ಲಕ್ಷ ಅರವತ್ನಾಲ್ಕು ಸಾವಿರದಾ ಅರವತ್ತಾರು ರೂಪಾಯಿಗಳು ಮಾತ್ರ.)** ರೂಪಾಯಿಗಳನ್ನು ಪಡೆದು ಕೇಂದ್ರ ಸಮುದಾಯ ನಾಯಕತ್ವದಲ್ಲಿ 9 ನೇ ವರ್ಷದಲ್ಲಿ ಮುಂದುವರೆಯುತ್ತಿರುವುದು ಸಂತಸದ ಸುದ್ದಿ.

**ಮಹಿಳೆಯರ ಕಾರ್ಯಕ್ರಮಗಳು**

ದಿ.8/3/2016 ರಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಮಹಿಳಾ ಒಕ್ಕೂಟದ ಸಹಯೋಗದಲ್ಲಿ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ 1200 ಜನರನ್ನು ಉದ್ದೇಶಿಸಿ ಮಹಿಳೆಯ ಸಶಕ್ತತೆ, ಬಾಲ್ಯವಿವಾಹ ತಾರತಮ್ಯ ಮಹಿಳಾ ಸಂಘಟನೆಯ ಬಗ್ಗೆ ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿದರು.

ದಿ.12/3/2016 ರಂದು ಮಹಿಳೆ ಉತ್ಕರ್ಷ ಮಂಡಳಿ ಏರ್ಪಡಿಸಿದ ಮಹಿಳಾ ದಿನಾಚರಣೆಯ ಮಹಿಳೆಯರು ಶಿಕ್ಷಣ ಪಡೆದು ಕೆಲಸ ಮಾಡಬೇಕು. 1098 ದ ಶಿಕ್ಷಣದ ಮಹತ್ವ ಸರ್ಕಾರದ ಸೌಲಭ್ಯಗಳು ನಬಾರ್ಡ್ ಬ್ಯಾಂಕಿನ ಸೌಲಭ್ಯ ಪಡೆಯುವಲ್ಲಿ ಮಹಿಳೆಯರು ಮುಂದಾಗಬೇಕೆಂದು ಸುನಂದಾ ತೋಳಬಂದಿಯವರು ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯಾಲಯದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ತಿಳಿಸಿದರು.

ದಿ.21/3/2016 ರಂದು ಶಾಂತಿನಗರದ ಪಂಚಮುಖಿ ಹನುಮಾನ ದೇವಸ್ಥಾನದ ಸಭಾಂಗಣದಲ್ಲಿ ಹಮ್ಮಿಕೊಂಡ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಸುನಂದಾ ತೋಳಬಂದಿಯವರು ಸ್ವಾವಲಂಬಿಯಾಗಲು ಮಹಿಳೆ ಯಾವ ರೀತಿ ಸರ್ಕಾರಿ ಸೌಲಭ್ಯಗಳನ್ನು ಬಳಿಸಬೇಕು. ಮಹಿಳೆಯರ ಸಮಸ್ಯೆಗಳಿಗೆ ಸಂವಹನ ಮಾಡಿದರೆ ಸೂಕ್ತ ಸಲಹೆ ಮಾರ್ಗದರ್ಶನ ನೀಡುವುದಾಗಿಹೇಳಿದರು.

ದಿ.30/3/2016 ರಂದು ವರ್ಲ್ಡ್ ವ್ಹಿಜನ್ ಆಪ್ ಇಂಡಿಯಾ ಸಂಸ್ಥೆ ಸಂಘಟಿಸಿದ ಕಂದಗಲ್ ಹನಮಂತರಾಯ ರಂಗಮಂದಿರದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆದಂದು ಬಾಲ್ಯವಿವಾಹದ ಕುರಿತು 500 ಕ್ಕೂ ಹೆಚ್ಚು ಜನರನ್ನು ಉದ್ದೇಶಿಸಿ ಮಾತನಾಡಿದರು.

ದಿ.17/12/2016 ರಂದು ವಿಶ್ವದ ಮಹಿಳಾ ದೌರ್ಜನ್ಯ ವಿರೋದಿ ದಿನ ಅಂಗವಾಗಿ ಕೊಪ್ಪಳದ ಸ್ನೇಹ ಮಹಿಳಾ ಸಂಘ, ಉಜ್ವಲ ಸಂಸ್ಥೆ ಇತರ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಆಚರಿಸಲಾಯಿತು. ಪ್ರಪಂಚದ ಎಲ್ಲ ಕಡೆ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ. ಅದರ ನಿಯಂತ್ರಣಕ್ಕಾಗಿ ಜಿಲ್ಲಾಧಿಕಾರಿ ಹಾಗೂ ಪೋಲಿಸ್ ವರಿಷ್ಟಾಧಿಕಾರಿಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳಿಗೆ ಸಮಾಜಕಲ್ಯಾಣ ಇಲಾಖೆಗಳ ಅಧಿಕಾರಿಗಳಿಗೆ ಹಾಗೂ ಜಿಲ್ಲಾ ನ್ಯಾಯಾಧೀಶರಿಗೆ ಮನವಿ ನೀಡಲಾಯಿತು.

**ಗಣ್ಯರಿಂದ/ಅಧಿಕಾರಿಗಳಿಂದ ಸಂಸ್ಥೆಗೆ ಭೇಟಿ ಹಾಗೂ ಅಭಿಪ್ರಾಯ**

| ದಿನಾಂಕ | ಭೇಟಿ ನೀಡಿದವರ ಹೆಸರು | ಹುದ್ದೆ | ಅಭಿಪ್ರಾಯ |
|---|---|---|---|
| 14/4/2015 | ಚವ್ಹಾಣ | ಪಿ.ಎಸ್.ಐ ದೇ.ಹಿಪ್ಪರಗಿ | NMD ಅತ್ಯುತ್ತಮವಾಗಿದೆ. |
| 17/4/2015 | ಡಾ॥ ಬಸವರಾಜ ಬಾಡಗಿ | TSU ಕಾರ್ಯಕ್ರಮಾಧಿಕಾರಿ | ಬಜೆಟ್ ಕುರಿತು ಮಾತನಾಡಿದರು. |
| 16/5/2015 | ಶರತಕುಮಾರ | ಇಂಟರನಲ್ ಅಡಿಟರ್ | 14–15 ನೇ ಸಾಲಿನ ಲೆಕ್ಕ–ಪತ್ರ ಪರಿಶೀಲಿಸಿದಾಗ ಉತ್ತಮವಾಗಿದೆ ಎಂದರು. |
| 26/5/2015 | ಹಣಮಂತ ಬಜಂತ್ರಿ | ಸಹಾಯಕ ಕಾರ್ಯಕ್ರಮಾಧಿಕಾರಿ CIF ಚೆನ್ನೈ | ಮಾದರಿ ಕಾರ್ಯಕ್ರಮ ಇದಾಗಿದೆ. |
| 27/5/2015 | ಮಹಾದೇವಪ್ಪ ದೇವರ | ಅಧ್ಯಕ್ಷರು ಮಕ್ಕಳ ಕಲ್ಯಾಣ ಸಮಿತಿ ವಿಜಯಪುರ | ಉಜ್ವಲ ಸಂಸ್ಥೆಯು ಪ್ರಾಮಾಣಿಕವಾಗಿ ಮಕ್ಕಳನ್ನು ರಕ್ಷಿಸುವ ಸೇವೆ ಮಾಡುತ್ತದೆ. |
| 9/6/2015 | ಶ್ರೀನಿವಾಸ ವಾಲಿಕಾರ | ಪಿ.ಡಿ ಬಾ.ಕಾ ಯೋಜನೆ ಸಂಘ ವಿಜಯಪುರ | ಬಾ.ಕಾ ರಕ್ಷಿಸುವಲ್ಲಿ ಉಜ್ವಲ ಸಂಸ್ಥೆ ಹಿಂದೇಟು ಹಾಕುವುದಿಲ್ಲ. |
| 16/6/2015 | ಬಿ.ವ್ಹಿ ತಳವಾರ | ಡಿಐಸ್,ಡ್ಯಾಪ್ಕೂ ವಿಜಯಪುರ | ದಾಖಲಾತಿ ಸರಿಯಾಗಿದೆ. |
| 25/6/2015 | ವ್ಹಿ.ಜಿ ಉಪಾದ್ಯಾಯ | ಜಿಲ್ಲೆಯ ಹಿರಿಯ ನಾಗರಿಕರ ವಿಕಲಚೇತನ ಅಧಿಕಾರಿ | ಜಿಲ್ಲೆಯಲ್ಲಿ ಉತ್ತಮವಾದ ಸೇವೆ ಸಲ್ಲಿಸುತ್ತಿರುವ ಸಂಸ್ಥೆ. |
| 10/7/2015 | ರಾಘವೇಂದ್ರ ಭಟ್ | ಯುನಿಸೆಫ್ ಅಧಿಕಾರ ಕೊಪ್ಪಳ | 22 ವರ್ಷಕ್ಕೂ ಹೆಚ್ಚಿನ ಅನುಭವವಿದೆ. ಅದಕ್ಕೆಂದೆ ಮಕ್ಕಳ ರಕ್ಷಣೆ ಚೆನ್ನಾಗಿದೆ. |
| 18/8/2015 | ಬಾಳನಗೌಡ ಎಸ್. ಪಾಟೀಲ | ಅಧ್ಯಕ್ಷರು ಜಾನಪದ ಪರಿಷತ್ ವಿಜಯಪುರ | NMD ವಿಕ್ಷಣೆ ಮಾಡಿ ಖುಷಿಪಟ್ಟೆವು. |
| 27/8/2015 | ಡಾ॥ ವ್ಹಿ.ಎಸ್ ಮಾದೇನವರ | ಕಾರ್ಯಕ್ರಮಾಧಿಕಾರಿ ಡ್ಯಾಪ್ಕೂ ಕೊಪ್ಪಳ | ಉತ್ತಮ ರೀತಿಯಲ್ಲಿ ಸೇವೆ ಮುಂದುವರೆಯಲಿ ಎಂದರು. |
| 31/8/2015 | ವಿನೂತನ MSW ಕಾಲೇಜ ವಿದ್ಯಾರ್ಥಿಗಳು ಕಲಬುರ್ಗಿ | | |
| 8/9/2015 | ಸಿ.ಎಸ್ ಪೂಜಾರಿ | ತಾಲೂಕಾಧಿಕಾರಿ ಹಿಂದುಳಿದ ವರ್ಗ&ಅಲ್ಪ ಸಂಖ್ಯಾತರ ಇಲಾಖೆ ಬ.ಬಾಗೇವಾಡಿ | ನಿಮ್ಮ ತಂಡ ಹಗಲಿರುಳು ಸೇವೆ ಸಲ್ಲಿಸುತ್ತಿರುವುದು ಅಮೋಘ. |
| 19/9/2015 | ಹುಷೇನ ಭಾಷಾ | ಡ್ಯಾಪ್ಕೂದ M&D | ವರದಿ ಸರಿಯಾಗಿ ನಿರ್ವಹಿಸಿದ್ದಿರಿ. |
| 29/9/2015 | 9 ಜನ ಕಾರ್ಯಕರ್ತರು | ಸ್ವಾಮಿ ವಿವೇಕಾನಂದ ಗ್ರಾಮೀಣ ಅಭಿವೃದ್ಧಿ ಸಂಸ್ಥೆ | ಯುಆರ್‌ಡಿಎಸ್‌ಎಸ್ ಸೇವೆಗೆ ಬೆಂಬಲಿಸುತ್ತೇವೆ. |
| 17/10/2015 | ಬಿ.ಕೆ ಮೂಕರ್ತಿಹಾಳ | ಪಿಎಸ್‌ಐ ದೇ.ಹಿಪ್ಪರಗಿ | ಮಕ್ಕಳ ಸಂಸತ್ ಚೆನ್ನಾಗಿತ್ತು. |
| 17/10/2015 | ಎಸ್.ಎ ಮುಜಾವರ | ಬಿಇಒ ಸಿಂದಗಿ | ಅತ್ಯುತ್ತಮ ವ್ಯವಸ್ಥೆ. |
| 23/10/2015 | ಐ.ಜಿ ನ್ಯಾಮಗೊಂಡ | ನಿರ್ದೇಶಕರು, ರುಡಸೆಟ್ | ಪ್ರಾಣದ ಭಯ ತೊರೆದು ಸೇವೆ ಮಾಡುವ |

| | | | |
|---|---|---|---|
| | | ಸಂಸ್ಥೆ ವಿಜಯಪುರ | ಉಜ್ವಲ ಸಂಸ್ಥೆಗೆ ರಾಷ್ಟ್ರಪ್ರಶಸ್ತಿ ಲಭಿಸಲಿ. |
| 20/11/2015 | ವ್ಹಿ.ಎಸ್ ಹಂದಿಗೋಳ | ವಿಷಯ ಪರಿವೀಕ್ಷಕರು ವಿಜಯಪುರ | ಉತ್ತಮ ಬೆಳವಣಿಗೆ ಸಂತೋಷವಾಗಿದೆ. ಇದೊಂದು ಅವಶ್ಯಕ ಕಾರ್ಯಕ್ರಮ. |
| 20/11/2015 | ಜಿ.ಎಸ್ ಗುಣಾರಿ | ಸಿಡಿಪಿಒ ಸಿಂದಗಿ | ಮಕ್ಕಳಿಗೆ ಹಿತಕರ ವಾತಾವರಣವಿದೆ. |
| 20/11/2015 | ಜಿ.ಎಸ್ ಮಳಗಿ | ತಹಸಿಲ್ದಾರ ಸಿಂದಗಿ | ಇಲ್ಲಿ ಒಳ್ಳೆಯ ವಾತಾವರಣ, ಸುಚಿತ್ವ ಎಲ್ಲವೂ ಅಚ್ಚುಕಟ್ಟಾಗಿದೆ. ಮಕ್ಕಳಿಗೆ ಅನುಕೂಲವಾಗಿದೆ. |
| 20/11/2015 | ಮಲ್ಲಿಕಾರ್ಜುನ ರೆಡ್ಡಿ | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ | ಪ್ರಸಂಶನೀಯ ಮಕ್ಕಳ ಆರೋಗ್ಯ ಅಭಿವೃದ್ಧಿ ಕಾರ್ಯ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ |
| 10/12/2015 | ವಿಕ್ಟರ್ ಟವರೋ | ಐಎಲ್‌ಪಿ ಅಧಿಕಾರಿ ಬೆಂಗಳೂರು | |
| 12/12/2015 | ಚಂದ್ರಕಾಂತ ಪ್ಯಾಟಿ | ಕಮ್ಯೂನಿಟಿ ಮುಖಂಡ ಮಣ್ಣೂರ | ಕೆಲಸ ಉತ್ತಮವಾಗಿದೆ. |
| 20/12/2015 | ಮದುಕೇಶವ ಎಸ್ | ಎಪಿಡಿ ಸಂಸ್ಥೆ ಬೆಂಗಳೂರು | ಸಂಸ್ಥೆಯು ಮಾಡುತ್ತಿರುವ ಕೆಲಸವು ತುಂಬಾ ಉತ್ತಮವಾಗಿದೆ. |
| 22/12/2015 | ಎಚ್.ಐ ಹಿರೂರ | ಎಸ್‌ಡಿಎಮ್‌ಸಿ ಅಧ್ಯಕ್ಷರು ಮುಳಸಾವಳಗಿ | ಅತ್ಯುತ್ತಮವಾಗಿದೆ. |
| 31/12/2015 | ಕೆ.ಎಮ್ ನಂದಿ | ಮುಖ್ಯೋಪಾಧ್ಯಾಯ ನಿವಾಳಖೇಡ | ಗೈರುಹಾಜರಾದ ಮಕ್ಕಳಿಗೆ ಸಹಾಯ ಒದಗಿಸಿ. |
| 7/1/2016 | ಎಸ್.ವ್ಹಿ ಸುರಕೋಡ | ಸ.ಬಾ.ಹಿ ಬಾಲ ಮಂದಿರ ವಿಜಯಪುರ | ಈ ಸಂಸ್ಥೆಯು ಇನ್ನೂ ಹೆಚ್ಚು ಹೆಚ್ಚು ಬೆಳೆಯಲಿ ಎಂದು ಆಶಿಸುವೆ. |
| 19/1/2016 | ಅರುಂದತಿ ಎ. ನಾಗಾವಿ | ಉಪತಹಸಿಲ್ದಾರ ಲಿಂಗಸೂರು | ಪ್ರತಿಯೊಬ್ಬರ ಸೇವೆ ಗಮನಾರ್ಹ ಹಾಗೂ ಸ್ವಾಗತಾರ್ಹ. |
| 19/1/2016 | ಡಾ॥ ಆರ್.ಸಿ ಕಾಮತ್ | ಸಿಇಒ ಜಿಲ್ಲಾ ಪಂಚಾಯತ ವಿಜಯಪುರ | ನೀರಿನ ವ್ಯವಸ್ಥೆ ಮಾಡಬೇಕಾಗಿದೆ. |
| 28/1/2016 | ವ್ಹಿ.ಜಿ ಉಪಾದ್ಯಾಯ | ಜಿಲ್ಲೆಯ ಹಿರಿಯ ನಾಗರಿಕರ ವಿಕಲಚೇತನ ಅಧಿಕಾರಿ | |
| 9/2/2016 | ಅಯ್ಯಪ್ಪ | ಸಹಾಯಕ ಕಾರ್ಯಕ್ರಮಾಧಿಕಾರಿ ಚೆನ್ನೈ | ಚೈಲ್ಡ್‌ಲೈನ್ ಎಲ್ಲ ಕಡೆ ತಲುಪಲಿ. |
| 24/2/2016 | ಡಾ॥ ಶ್ರವಣಕುಮಾರ ಮೋಟಕರ | ಡಾ॥ ಪಿಎಚ್‌ಸಿ ದೇ.ಹಿಪ್ಪರಗಿ | |
| 29/3/2016 | ಮಲ್ಲಿಕಾರ್ಜುನ ರೆಡ್ಡಿ | ಡಿಸಿಪಿಯು ವಿಜಯಪುರ | ಮಕ್ಕಳ ಪುನರ್ವಸತಿ ರಕ್ಷಣೆ, ಶಿಕ್ಷಣ,ಆರೋಗ್ಯ ಸೇವೆ ಉತ್ತಮವಾಗಿದೆ. |

**ಸಂಸ್ಥೆಯಿಂದ ಭಾಗವಹಿಸಿದ ಸಭೆಗಳು**

| ದಿನಾಂಕ | ಸ್ಥಳ | ವಿಷಯ | ಸಂಘಟನೆ | ಭಾಗವಹಿಸಿದವರು |
|---|---|---|---|---|
| 7/4/2015 | ಕೆಸಾಪ್ಸ್ ಕಾರ್ಯಾಲಯ | ಎಚ್.ಐ.ವಿ/ಏಡ್ಸ್ | ಡ್ಯಾಪ್ಕ್ಯು ವಿಜಯಪುರ | ವಾಸುದೇವ ತೋಳಬಂದಿ |
| 13/4/2015 | ಎನ್‌ಟಿಪಿಸಿ | ವಕಾಲತ್ತು | ಉಜ್ವಲ ಕೆಸಾಪ್ಸ್ | ವಾಸುದೇವ ತೋಳಬಂದಿ |
| 23/4/2015 | ಎ.ಆರ್.ಟಿ ಕೇಂದ್ರ ಕೊಪ್ಪಳ | ಸಂಯೋಜನಾ ಸಭೆ | ಎ.ಆರ್.ಟಿ ಕೇಂದ್ರ | ಯಲ್ಲಪ್ಪ ಇರಕಲ್ ಕಾರ್ಯಕ್ರಮ ವ್ಯವಸ್ಥಾಪಕರು |
| ಜುಲೈ 31 ರಿಂದ ಅಗಷ್ಟ 3 | ಅಣ್ಣಾ ಜನರ್‌ಲೇಟ್ ಸಿಕಂದರಾಬಾದ | ಐಎಲ್‌ಪಿ ಪೇರೆಂಟ್ಸ್ ಮೀಟ್ | ಐಎಲ್‌ಪಿ | ವಾಸುದೇವ ತೋಳಬಂದಿ & ಸಾಗರ ಘಾಟಗೆ |
| 6/8/2015 | ಆರೋಗ್ಯ & ಕುಟುಂಬ ಕಲ್ಯಾಣ ಸಂಸ್ಥೆ ತರಬೇತಿ ಕೇಂದ್ರ ಬೆಂಗಳೂರು | ಮಕ್ಕಳ ಸಹಾಯವಾಣಿ | ಸಿಐಎಫ್ ಮ.ಮ.ಅ ಇಲಾಖೆ ಬೆಂಗಳೂರು | ಸುನಂದಾ ತೋಳಬಂದಿ & ವಾಸುದೇವ ತೋಳಬಂದಿ |
| 26/8/2015 | ಡಿಸಿ ಕಾರ್ಯಾಲಯ ವಿಜಯಪುರ | ಬಾಲ್ಯ ವಿವಾಹ | ಮ.ಮ.ಅ ಇಲಾಖೆ ವಿಜಯಪುರ | ಸುನಂದಾ ತೋಳಬಂದಿ & ವಾಸುದೇವ ತೋಳಬಂದಿ |
| 18/10/2015 | ಸರ್ಕಾರಿ ಹಿರಿಯ ಬಾಲಕರ ಬಾಲ ಮಂದಿರ | ಮಕ್ಕಳ ದಿನಾಚರಣೆ ಪೂರ್ವ ತಯಾರಿ | ಡಬ್ಲ್ಯೂ &ಸಿಡಿ ವಿಜಯಪುರ | ಸುನಂದಾ ತೋಳಬಂದಿ 1098 ದ ಸಂಯೋಜಕಿ |
| 18/11/2015 | ಸರ್ಕಾರಿ ಹಿರಿಯ ಬಾಲಕರ ಬಾಲ ಮಂದಿರ | ಮಕ್ಕಳ ದಿನಾಚರಣೆ ಪೂರ್ವ ತಯಾರಿ | ಡಬ್ಲ್ಯೂ &ಸಿಡಿ ವಿಜಯಪುರ | ಸುನಂದಾ ತೋಳಬಂದಿ 1098 ದ ಸಂಯೋಜಕಿ |
| 8/12/2015 | ಧಾರವಾಡ ಸೇವಾಲಯ | ಮಕ್ಕಳ ಸ್ನೇಹಿ ಶಾಲೆ ವಾಸ್ತವ ಕಲ್ಪನೆಯಿಂದ ಶಾಲೆಗಳ ಸಮಸ್ಯೆಗಳಿಗೆ ಪರಿಹಾರ ಆರ್‌ಟಿಇ | ಕೆಸಿಆರ್‌ಓ ಬೆಂಗಳೂರು | ವಾಸುದೇವ ತೋಳಬಂದಿ |
| 29/12/2015 | ಗೋಲ್ಡನ್ ಹೈಟ್ ಹೊಟೇಲ್ | ಪರಿಸರ ಸಂರಕ್ಷಣೆ | ದಕ್ಷಿಣ ಪರಿಸರ ಸಂರಕ್ಷಣಾ ಸಂಸ್ಥೆ | ವಾಸುದೇವ ತೋಳಬಂದಿ |
| 18/1/2016 | ಚಿಂತನಾಹಾಲ್ ವಿಜಯಪುರ | ಮಕ್ಕಳ ರಕ್ಷಣೆ | ಪೋಲಿಸ್ ಇಲಾಖೆ | ಸುನಂದಾ ತೋಳಬಂದಿ, ಶಕುಂತಲಾ ದಶವಂತ, ಶಶಿಕಲಾ ಜಾಬೇನವರ |
| 5/2/2016 | ಎಆರ್‌ಟಿ ಕೇಂದ್ರ ಕೊಪ್ಪಳ | ಎಲ್‌ಎಫ್‌ಯು ಮಿಲ್ ಪಾಲೋ ಅಪ್ | ಆರೋಗ್ಯ ಇಲಾಖೆ | ಸುನಂದಾ ತೋಳಬಂದಿ, ಶಕುಂತಲಾ ದಶವಂತ, ಶಶಿಕಲಾ ಜಾಬೇನವರ |

| | | | | |
|---|---|---|---|---|
| 21/3/2016 | ಜಿಲ್ಲಾಧಿಕಾರಿಗಳ ಕಛೇರಿ ವಿಜಯಪುರ | ಮಕ್ಕಳ ಬಾಲ್ಯ ವಿವಾಹ | ಜಿಲ್ಲಾಡಳಿತ | ಸಂಯೋಜಕರು 1098 ಸುನಂದಾ ತೋಳಬಂದಿ |

**ಸಿಬ್ಬಂದಿಗಳು ತರಬೇತಿ ಪಡೆದಿದ್ದು**

| ದಿನಾಂಕ | ವಿಷಯ | ಸ್ಥಳ | ಸಂಘಟನೆ | ಭಾಗವಹಿಸಿದವರು |
|---|---|---|---|---|
| 27 ರಿಂದ 30 ಎಪ್ರಿಲ್ 2015 | ಲೈಂಗಿಕ ದೌರ್ಜನ್ಯ ಹಿಂಸೆ | ಹೊಟೇಲ್ ವಿಜಯ ರೆಸಿಡೆನ್ಸಿ ಬೆಂಗಳೂರು | ಚೈಲ್ಡ್‌ಲೈನ್ ಇಂಡಿಯಾ ಫೌಂಡೇಶನ್ ಯುನಿಸೆಫ್ | ಸುನಂದಾ ತೋಳಬಂದಿ &ವಾಸುದೇವ ತೋಳಬಂದಿ |
| 3/5/2015 | ನೀರು | ರಾಷ್ಟ್ರೋತ್ಥಾನ ಶಾಲೆ ಗದಗ | ರಾಷ್ಟ್ರೋತ್ಥಾನ ಶಾಲೆ | ವಾಸುದೇವ ತೋಳಬಂದಿ |
| 9/6/2015 | ಮಕ್ಕಳ ಸಂರಕ್ಷಣೆ ಸಹಬಾಗೀತ್ವ & ಸಮನ್ವಯತೆ | – | – | ವಾಸುದೇವ ತೋಳಬಂದಿ |
| 9 ರಿಂದ 10 ಜುಲೈ 2015 | ಪೋಕ್ಸೊ | ಹೊಟೇಲ್ ನವರತ್ನ ವಿಜಯಪುರ | ಡಬ್ಲ್ಯೂ&ಸಿಡಿ ವಿಜಯಪುರ | ಮಕ್ಕಳ ಸಹಾಯವಾಣಿ ತಂಡ |
| 30/7/2015 | ಪೋಕ್ಸೊ 2012 | ಚಿಂತನಾ ಹಾಲ್ ಎಸ್‌ಪಿ ಆಫೀಸ್ | ಪೋಲಿಸ್ ಇಲಾಖೆ ವಿಜಯಪುರ | ಸಹಾಚಿಯವಾಣಿಯ 5 ಜನ ಸಿಬ್ಬಂದಿ |
| 20 & 21 ಅಗಷ್ಟ 2015 | ಸದಸ್ಯರಿಗೆ ಸಾಮರ್ಥ್ಯಾಭಿವೃದ್ಧಿ | ಎಸ್.ಸಿ.ಎಮ್ ಹೌಸ್ ಬೆಂಗಳೂರು | ಕೆ.ಸಿ.ಆರ್.ಓ ಬೆಂಗಳೂರು | ವಾಸುದೇವ ತೋಳಬಂದಿ |
| 19/9/2015 | ಶೋಷಿತ ಮಕ್ಕಳಿಗೆ ಶಿಕ್ಷಣದಲ್ಲಿ ಮೀಸಲಾತಿ | ದಮವಂತಿ ಅಧ್ಯಯನ ಪೀಠ ಮೈಸೂರು | ನೆಟ್ ಕೆ ಹಾಗೂ ಒಡನಾಡಿ | ಯಲ್ಲಪ್ಪ ಇರಕಲ್ ಕಾರ್ಯಕ್ರಮ ವ್ಯವಸ್ಥಾಪಕರು |
| 29/2/2016 | ಐಸಿಪಿಎಸ್ ಯೋಜನೆ ಮಕ್ಕಳ ಹಕ್ಕು | ಸ್ತ್ರೀಶಕ್ತಿ ಭವನ | ಡಬ್ಲ್ಯೂ&ಸಿಡಿ ವಿಜಯಪುರ | ಸಹಾಯವಾಣಿಯ 3 ಜನ ಸಿಬ್ಬಂದಿ |
| 10/3/2016 | ಸಿಂಗಲ್ ವಿಂಡೊ ತರಬೇತಿ | ZP ಕಾರ್ಯಾಲಯ ಕೊಪ್ಪಳ | ಡ್ಯಾಪ್ಕೊ ಕೊಪ್ಪಳ | ಕಾರ್ಯಾಲಯ ವ್ಯವಸ್ಥಾಪಕರು |
| 25 ರಿಂದ 27 ಮಾರ್ಚ 2016 | ಪ್ರಕೃತಿ ಚಿಕಿತ್ಸೆ | ಮಹಾಂತ ತೀರ್ಥದ ಹತ್ತಿರ ಶಿರೋಳ | ಶ್ರೀದೇವಿ ಪ್ರಕೃತಿ ಚಿಕಿತ್ಸೆ ಯೋಗ ವಿಜ್ಞಾನ ಕೇಂದ್ರ ವಿಭಾಗ ವಿಜಯಪುರ | ವಾಸುದೇವ ತೋಳಬಂದಿ ಸುನಂದಾ ತೋಳಬಂದಿ |

**ತರಬೇತಿ ನೀಡಿದ್ದು**

| ದಿನಾಂಕ | ವಿಷಯ | ಸ್ಥಳ | ತರಬೇತಿ ನೀಡಿದವರು |
|---|---|---|---|
| 7/4/2015 | ಟಿ.ಐ ಯೋಜನೆ ಕುರಿತು | ಕಾರ್ಯಾಲಯ ಹೊಸಳ್ಳಿ | ಕಾರ್ಯಕ್ರಮ ವ್ಯವಸ್ಥಾಪಕರು ಎಮ್&ಡಿ ವಿಜಯಪುರ |
| 22/4/2015 | ದಾಖಲಾತಿ | ಯುಆರ್‌ಡಿಎಸ್‌ಎಸ್ ಕಾರ್ಯಾಲಯ | ಸುನಂದಾ ತೋಳಬಂದಿ |
| 3/5/2015 | ಸಮಾಜ ಸೇವೆ ಏಕೆ,ಹೇಗೆ,ಎಲ್ಲಿ | ರಾಷ್ಟ್ರೋತ್ಥಾನ ಶಾಲೆ ಗದಗ | ವಾಸುದೇವ ತೋಳಬಂದಿ ಸಮಾಜ ಸೇವಾ ಕಾರ್ಯಕರ್ತರು |
| 28/5/2015 | ದಾಖಲಾತಿ ಪೋಕ್ಸೊ ಜೆಜೆ ಆಕ್ಟ್ ಬಾ.ವಿ ಹಕ್ಕುಗಳು | ಯುಆರ್‌ಡಿಎಸ್‌ಎಸ್ ವಿಜಯಪುರ | ಸುನಂದಾ ತೋಳಬಂದಿ, ಹಣಮಂತ ಬಜಂತ್ರಿ |
| 5/9/2015 | ಮಕ್ಕಳ ರಕ್ಷಣೆ | ನಮ್ಮೂರು ಕೇಂದ್ರ ಪಡಗಾನೂರ | ಸ್ನೇಹ ಸಂಸ್ಥೆ ಬಳ್ಳಾರಿ ಉಜ್ವಲ ಸಂಸ್ಥೆ ಮುಖ್ಯಸ್ಥರು |
| 24/10/2015 | ಮಕ್ಕಳ ಹಕ್ಕುಗಳು, ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ನ್ಯಾಯ ಕಾಯಿದೆ | ನಮ್ಮ ಮಕ್ಕಳ ಧಾಮ ವಿಜಯಪುರ | ವಾಸುದೇವ ತೋಳಬಂದಿ & ಸಾಗರ ಘಾಟಗೆ |
| 29/10/2015 | ಪೋಕ್ಸೊ ಮಕ್ಕಳ ನ್ಯಾಯ ಕಾಯಿದೆ | ತಾಲೂಕಾ ಪಂಚಾಯಿತಿ ಬ.ಬಾಗೆವಾಡಿ | ಸುನಂದಾ ತೋಳಬಂದಿ |
| 2/1/2016 | ಮಕ್ಕಳ ಹಕ್ಕುಗಳು | ಸ್ತ್ರೀ ಶಕ್ತಿ ಭವನ | ಸುನಂದಾ ತೋಳಬಂದಿ |
| 7/1/2016 | ಮಕ್ಕಳ ಹಕ್ಕುಗಳು | ಸ್ತ್ರೀ ಶಕ್ತಿ ಗುಂಪು | ಸುನಂದಾ ತೋಳಬಂದಿ |
| 17/1/2016 | ಬಾಲ್ಯವಿವಾಹದ ಕಾರಣಗಳು,ಪರಿಣಾಮಗಳು, ಸವಾಲುಗಳು | ಜಿಲ್ಲಾ ಕೋರ್ಟ್ ಎಲ್ಲ ನ್ಯಾಯಾಧೀಶರಿಗೆ | ಸುನಂದಾ ತೋಳಬಂದಿ |
| 20/1/2016 | ಮಕ್ಕಳ ಹಕ್ಕುಗಳು | ಸ್ತ್ರೀ ಶಕ್ತಿ ಸಂಘದ 30 ಮಹಿಳೆಯರು | ಸುನಂದಾ ತೋಳಬಂದಿ |
| 19/2/2016 | ಮಕ್ಕಳ ಹಕ್ಕುಗಳು | 60 ಅಲ್ಪಸಂಖ್ಯಾತರು (ಲೈಂಗಿಕ) | ಸುನಂದಾ ತೋಳಬಂದಿ |

**ವಿಶೇಷ ಕಾರ್ಯಕ್ರಮಗಳು**

ದಿ. 21 ಜೂನ್ 2015 ರಂದು ದೀಪಕ ಮೆಲೋಡಿಸ, ಸಿದ್ದು ಮೇಲಿನಮನಿ, ಜಗದೀಶ ಮಣ್ಣೂರ, ದುಂಡಪ್ಪ ಪೂಜಾರ ಇವರಿಂದ ನಮ್ಮ ಮಕ್ಕಳ ಧಾಮದಲ್ಲಿ ಮಕ್ಕಳಿಗೆ ಮನರಂಜನೆ ಕಾರ್ಯಕ್ರಮ ಮಾಡಲಾಯಿತು.

ದಿ. 14/8/2015 ರಂದು ಪಬ್ಲಿಕ್ ಟಿವ್ಹಿಯವರು ನಮ್ಮ ಮಕ್ಕಳ ಧಾಮಕ್ಕೆ ಬಂದು ಶೂಟಿಂಗ್ ಮಾಡಿದರು.

ದಿ.18/8/2015 ರಂದು ಬೆಂಗಳೂರ ಪಬ್ಲಿಕ್ ಟಿವ್ಹಿ ಸ್ಟುಡಿಯೋದಲ್ಲಿ ನಮ್ಮ ಮಕ್ಕಳಧಾಮದ ಕಾರ್ಯಚಟುವಟಿಕೆಗಳ ಕುರಿತು ಉಜ್ವಲ ಸಂಸ್ಥೆಯ ನಿರ್ದೇಶಕರಾದ ವಾಸುದೇವ ತೋಳಬಂದಿ ಹಾಗೂ ನಮ್ಮ ಮಕ್ಕಳ ಧಾಮದ ಮಕ್ಕಳಾದ

ನವೀನ ಮತ್ತು ಸುಭಾಷ, ಪಬ್ಲಿಕ್ ಟಿವ್ಹಿಯ ರಂಗನಾಥ, ಅಕುಲ ಬಾಲಾಜಿ ಅವರೊಂದಿಗೆ ಸಂದರ್ಶನ ಪಬ್ಲಿಕ್ ಟಿವ್ಹಿಯಲ್ಲಿ ಬೆಳಕು ಕಾರ್ಯಕ್ರಮ ನಡೆಸಲಾಯಿತು.

ದಿ.29/8/2015 ರಂದು ಸಂದರ್ಶನ ಕುರಿತು ಪಬ್ಲಿಕ್ ಟಿವ್ಹಿಯಲ್ಲಿ ಬೆಳಕು ಕಾರ್ಯಕ್ರಮ ಪ್ರದರ್ಶನ ಮಾಡಲಾಯಿತು.

ದಿ.2/9/2015 ರಂದು ಉಜ್ವಲ ಸಂಸ್ಥೆಯ ನಿರ್ದೇಶಕರಾದ ವಾಸುದೇವ ತೋಳಬಂದಿಯವರ ಹುಟ್ಟುಹಬ್ಬವನ್ನು ನಮ್ಮೂರಿನ ಕಾರ್ಯಕರ್ತರು ಹಾಗೂ ಮಕ್ಕಳು ಕೇಕ್ ಕಟ್ ಮಾಡಿ ಆಚರಿಸಿದರು. ಹುಟ್ಟಿದ ದಿನದ ಅಂಗವಾಗಿ ತೆಂಗಿನ ಗಿಡವನ್ನು ಹಚ್ಚಿದೇವು.

.

**ಗಾಂಧಿ ಶಾಸ್ತ್ರಿ ಜಯಂತಿಯಂದು ಶ್ರಮಧಾನ**

ಅಕ್ಟೋಬರ 2 2015 ರಂದು ಗಾಂಧಿ ಶಾಸ್ತ್ರಿ ಅವರ ಜಯಂತಿ ಅಂಗವಾಗಿ ಡ್ರೈವರ್–ಕ್ಲಿನರ್, ಟ್ರಾನ್ಸ್‌ಪೋರ್ಟ್ ಏಜಂಟರು, ಮಾಲಕರು, ಹೊಟೇಲ್ ಮಾಲಿಕರೊಂದಿಗೆ ತಗ್ಗುಗಳನ್ನು ಮುಚ್ಚುವದು, ಕಸ ಗುಡಿಸುವುದು, ಕಸದರಾಶಿಗೆ ಬೆಂಕಿ ಹಚ್ಚುವುದು ಸ್ವಚ್ಛತೆಯಿಂದಾಗುವ ವಿವಿಧ ಲಾಭಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಿ ಕೊಪ್ಪಳ ಜಿಲ್ಲೆ ಹೊಸಳ್ಳಿ ಟ್ರಾನ್ಸ್‌ಪೋರ್ಟ್ ಪ್ರದೇಶದಲ್ಲಿ ಹಮ್ಮಿಕೊಳ್ಳಲಾಯಿತು.

**ರಾಷ್ಟ್ರೀಯ ದಿನಾಚರಣೆ**

ದಿ.26/1/2016 ರಂದು ಗಣರಾಜ್ಯೋತ್ಸವದ ಅಂಗವಾಗಿ ಸಿಂದಗಿ ತಾಲೂಕಿನ ಕಡ್ಲೇವಾಡ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಅತಿಥಿಯಾಗಿ ಐ.ಎಲ್.ಪಿ ಯೋಜನೆಯ ಸಂಯೋಜಕರಾದ ಸಾಗರ ಘಾಟಗೆಯವರು ಭಾಗವಹಿಸಿ, ನೆರೆದ ಗ್ರಾಮಸ್ಥರಿಗೆ ಹಾಜರಾತಿ, ಶಿಕ್ಷಣದ ಮಹತ್ವ, ಮಕ್ಕಳ ಹಕ್ಕುಗಳು, ಎಸ್‌ಡಿಎಮ್‌ಸಿ ಸದಸ್ಯರ ಪಾತ್ರ ಗ್ರಾಮಾಭಿವೃದ್ಧಿ ಮತ್ತು ಶಿಕ್ಷಣದಲ್ಲಿ ಗ್ರಾಮಸ್ಥರ ಪಾತ್ರ ಕುರಿತು ಮಾತನಾಡಿದರು. ಸ್ವ–ಸಹಾಯ ಸಂಘದ ಮಹಿಳೆಯರು, ಗ್ರಾಮಪಂಚಾಯಿತಿ ಸದಸ್ಯರು, ಯುವಕರು, ಶಾಲಾ ಮಕ್ಕಳು ಸಮುದಾಯದ ಮುಖಂಡರು ಭಾಗವಹಿಸಿದ್ದರು.

**ಸಾಧನೆಗಳು**

- ಲೈಂಗಿಕ ದೌರ್ಜನ್ಯಗಳಾದ ಪೋಲಿಸ್‌ಠಾಣೆಯಲ್ಲಿ ಪ್ರಕರಣ ದಾಖಲಾಗುವಂತೆ ಹಿರಿಯ ಅಧಿಕಾರಿಗಳು ನ್ಯಾಯಾಧೀಶರೊಂದಿಗೆ ವಕಾಲತ್ತು ನಡೆಸಲಾಗಿದೆ.
- 102 ಬಾಲ್ಯವಿವಾಹಗಳನ್ನು ತಡೆಯಲಾಗಿದೆ.
- ಚೈಲ್ಡ್‌ಲೈನ್‌ದಿಂದ ಎಲ್ಲ 55 ವಿಕಲಚೇತನ ಮಕ್ಕಳಿಗೆ ಸೌಲಭ್ಯಗಳನ್ನು ಕೊಡಿಸಲಗಿದೆ.
- 115 ಶಾಲೆಗಳಲ್ಲಿ ಮಕ್ಕಳ ರಕ್ಷಣೆ, ಬಾಲ್ಯವಿವಾಹ ಮಕ್ಕಳ ಲೈಂಗಿಕ ದೌರ್ಜನ್ಯಗಳ ಕುರಿತು ಮಕ್ಕಳಿಗೆ ತಿಳಿಸಲಾಯಿತು.
- ಗಿಣಗೇರು ಹತ್ತಿರವಿರುವ ಅಲ್ಟ್ರಾಟೆಕ್ ಸಿಮೆಂಟ ಕಂಪನಿಗೆ ಅಧಿಕಾರಿಗಳೊಂದಿಗೆ ವಕಾಲತ್ತು ಮಾಡಿ ಅವರ ಸಹಯೋಗದೊಂದಿಗೆ ಕಾರ್ಖಾನೆಯಲ್ಲಿ ಖುಷಿ ಕ್ಲಿನಿಕ್ ಕ್ಯಾಂಪ್‌ಗಳನ್ನು ಮಾಡಲಾಯಿತು.
- ಜಿಎಮ್‌ಆರ್ ಟೋಲ್ ನಾಕಾ ಸಿಬ್ಬಂದಿಗೆ ಎಚ್.ಐ.ವಿ/ಏಡ್ಸ್ ಕುರಿತು 45 ಜನರಿಗೆ ಅರಿವು ಕಾರ್ಯಕ್ರಮ ನೀಡಲಾಯಿತು.
- ಖಾಸಗಿ ವಾಹನ ಚಾಲಕರಿಗೆ **ಅಪಘಾತ ಪರಿಹಾರ ನಿಧಿ** ಯೋಜನೆಯಡಿಯಲ್ಲಿ ಕೊಪ್ಪಳದಲ್ಲಿ 30 ಜನರಿಗೆ ಅರ್ಜಿ ಕೊಡಿಸಿ ಉಚಿತವಾಗಿ ಗುರುತಿನ ಪತ್ರ ಕಾರ್ಮಿಕ ಇಲಾಖೆಯಿಂದ ಕೊಡಿಸಲಾಯಿತು.

- ವಿಜಯಪುರ ಬಾಗಲಕೋಟ ಜಿಲ್ಲೆಯ ಅನಾಥ ಮತ್ತು ಅಪಾಯದಂಚಿನಲ್ಲಿರುವ ಎಚ್.ಐ.ವಿ ಸೋಂಕಿತ ಮಕ್ಕಳಿಗೆ ಸ್ಥಳಿಯ ದಾನಿಗಳು, ವ್ಯಾಪಾರಸ್ಥರು, ಅಧಿಕಾರಿಗಳು ನಮ್ಮ ಮಕ್ಕಳ ಧಾಮಕ್ಕೆ ವಸ್ತು, ಧಾನ್ಯ ಹಾಗೂ ಹಣದ ರೂಪದಲ್ಲಿ 3,64,066/–(ಮೂರು ಲಕ್ಷ ಅರವತ್ತ ನಾಲ್ಕು ಸಾವಿರದಾ ಅರವತ್ತಾರು ರೂ.ಗಳು ಮಾತ್ರ.) ಮೌಲ್ಯದ ಸಂಪನ್ಮೂಲ ಸಂಗ್ರಹಿಸಲಾಗಿದೆ.
- ಐ.ಸಿ.ಟಿ.ಸಿ ಮತ್ತು ಲೈಂಗಿಕ ಖಾಯಿಲೆಗಳ ಗುರುತಿಸುವಿಕೆಯಲ್ಲಿ ಕೊಪ್ಪಳ ಮತ್ತು ವಿಜಯಪುರದಲ್ಲಿ 100% ಕ್ಕೂ ಹೆಚ್ಚಿನ ಗುರಿ ತಲುಪಲಾಗಿದೆ.

**ಸರ್ಕಾರಿ ವಿವಿಧ ಇಲಾಖೆಗಳಲ್ಲಿ ಸದಸ್ಯತ್ವ**

- ವಿಜಯಪುರ ಸರ್ಕಾರಿ ಬಾಲಕರ ಬಾಲ ಮಂದಿರದ ಶಾಲಾ ಸುಧಾರಣೆ ಮತ್ತು ಉಸ್ತುವಾರಿ ಸಮಿತಿ ಸದಸ್ಯರನ್ನಾಗಿ ಚೈಲ್ಡ್ ಲೈನ್ ದ ಸುನಂದಾ ತೋಳಬಂದಿಯವರನ್ನು ನೇಮಿಸಲಾಯಿತು.
- ಸಂಸ್ಥೆಯ ನಿರ್ದೇಶಕರಾದ ವಾಸುದೇವ ತೋಳಬಂದಿಯವರು ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

**ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಂದ ಸಂಸ್ಥೆಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದು**

1. ಚಂದ್ರವ್ವ ಕೆ. ಕಳ್ಳಿಮನಿ
2. ಭಾಗೀರಥಿ ಬಿ. ಕುಂಬಾರ
3. ಸುಷ್ಮಾ ಕೆ. ಬಾವಿಕಟ್ಟಿ

ಇವರು ಕರ್ನಾಟಕದ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸಮಾಜ ಕಾರ್ಯ ಅಧ್ಯಯನ ವಿಭಾಗದ ವಿದ್ಯಾರ್ಥಿಗಳು ಕಾರ್ಯಕ್ಷೇತ್ರದ ಭೇಟಿಗಾಗಿ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದರು. ದಿ.21 ಜನೆವರಿಯಿಂದ 29 ಎಪ್ರಿಲ್ 2015 ರವರೆಗೆ ನಮ್ಮಲ್ಲಿ ಉಜ್ವಲ ಸಂಸ್ಥೆಯ ಕಾರ್ಯಕರ್ತರೊಂದಿಗೆ ಸೇರಿ ಮಕ್ಕಳ ಸಮಸ್ಯೆಗಳಿಗೆ ಸ್ಪಂದಿಸುವುದು, ದೈಹಿಕ, ಮಾನಸಿಕ, ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಕುರಿತು ವಿವಿಧ ಪದ್ಧತಿ ಹಾಗೂ ತಂತ್ರಗಳನ್ನು ಬಳಸಿ ಮಕ್ಕಳ ಸಮಸ್ಯೆಗಳಿಗೆ ಪರಿಹಾರಕ್ಕಾಗಿ ದಾನಿಗಳಿಂದ ಹಣ ಸಂಗ್ರಹಿಸಿದರು. ಅದರಂತೆ ರಾಣಿ ಚನ್ನಮ್ಮಾ ಬೆಳಗಾಂವಿ ವಚನ ಸಂಗಮ ಪಿ.ಜಿ ಸೆಂಟರ್ ಸಮಾಜ ಕಾರ್ಯ ಅದ್ಯಯನ ವಿಭಾಗದ ಶೋಭಾ ಕೆ, ಚನಬಸಪ್ಪ ಎಸ್.ತರಲಗಟ್ಟಿ ಅವರು ಕಾರ್ಯಕ್ಷೇತ್ರದಲ್ಲಿ ಸೇವೆ ಸಲ್ಲಿಸಿದರು. ದಿ. 10 ಸೆಪ್ಟಂಬರ ದಿಂದ 22 ಮೇ ದವರೆಗೆ ತರಬೇತಿ, ವ್ಯಕ್ತಿ ಕಥನ, ಸಂಸ್ಥೆಯ ಸೇವೆಯಲ್ಲಿ ಬರುವ ಸಮಸ್ಯೆಗಳ ಬಗ್ಗೆ ತಿಳಿದುಕೊಂಡರು.

**ಆಡಳಿತಾತ್ಮಕ**

ಒಟ್ಟು ಸಂಸ್ಥೆಯ ಕಾರ್ಯಕಾರಿ ಸಮಿತಿಯಿಂದ ಮೂರು ಸಭೆಗಳನ್ನು ಕರೆಯಲಾಯಿತು.(15 ಜೂನ್ 2015, 27 ಸಪ್ಟೆಂಬರ 2015, 1 ಫೆಬ್ರುವರಿ 2016) ಈ ಸಭೆಗಳಲ್ಲಿ ವಾರ್ಷಿಕ ಫೀ ಪಡೆಯಬಹುದು. ಹೊಸ ಯೋಜನೆಗಳಿಗೆ ಅರ್ಜಿ ಸಲ್ಲಿಸುವುದು, ಸಂಸ್ಥೆಗೆ ಲೆಕ್ಕ ಪರಿಶೋಧಕರ ನೇಮಕ ಮಾಡುವುದು, ಸಂಸ್ಥೆಯ ಆಯವ್ಯಯ ಪರಿಶೀಲನೆ, ಸಂಸ್ಥೆಯ ಕಾರ್ಯಚಟುವಟಿಕೆಗಳ ಮಾಹಿತಿ ಪಡೆಯುವುದು. ಹೊಸ ಕಾರ್ಯಕಾರಿ ಸಮಿತಿ ರಚನೆ, ನಮ್ಮೂರು ಕೇಂದ್ರಕ್ಕೆ ದಾನಿಗಳ ಸಹಾಯ ಪಡೆಯುವುದು, ನಮ್ಮೂರು ಕೇಂದ್ರಕ್ಕೆ ನೀರು ಒದಗಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಭೇಟಿ ಆಗುವುದು, ಮಕ್ಕಳಿಗಾಗಿ ಶೌಚಾಲಯ ಕಟ್ಟುವುದು. ಮಕ್ಕಳ ಸಹಾಯವಾಣಿಗೆ ಪಡೆದ ಹಣ ಮರಳಿಸುವ ಕುರಿತು ಸಭೆಯಲ್ಲಿ ಚರ್ಚಿಸಿ ನಿರ್ಣಯಗಳನ್ನು ಕೈಕೊಳ್ಳಲಾಯಿತು.

ನಮ್ಮ ಸಂಸ್ಥೆಯ ಸಿಬ್ಬಂದಿಯಾದ ಯಮನಪ್ಪ ಅವರ ಅಪಘಾತದಿಂದ ಸಂಸ್ಥೆಗೆ ತುಂಬಲಾರದಷ್ಟು ನಷ್ಟವಾಗಿದೆ. ಎಂದು ಮೌನ ಆಚರಣೆ ಮಾಡಲಾಯಿತು. ಬಾಲಕಾರ್ಮಿಕ ಮಕ್ಕಳ ವಿಶೇಷ ಶಾಲೆಯ ಹಣ ಮೇಲಾಧಿಕಾರಿಗಳಿಗೆ ಪತ್ರ ಬರೆದು ಸಂಸ್ಥೆಗೆ ಹಣ ಪಡೆಯುವ ಕುರಿತು ಚರ್ಚಿಸಿ ನಿರ್ಣಯ ಕೈಕೊಳ್ಳಲಾಯಿತು.

**ಎದುರಿಸಿದ ಸಮಸ್ಯೆಗಳು**

1) ನಮ್ಮ ಮಕ್ಕಳ ಧಾಮಕ್ಕೆ ಕುಡಿಯುವ ನೀರಿನ ಸಮಸ್ಯೆ.
2) ಬಾಲ್ಯವಿವಾಹ ತಡೆಯುವ ಅಧಿಕಾರಿಗಳೆಂದು ನಿಯಮಿಸಲ್ಪಟ್ಟ ಹೆಚ್ಚಿನ ಅಧಿಕಾರಿಗಳು ಬಾಲ್ಯವಿವಾಹ ತಡೆಯದೇ ಇರುವುದು.
3) ಆಯಾ ಯೋಜನೆಗಳಿಗೆ ಸಕಾಲದಲ್ಲಿ ಹಣ ಮೇಲಿನಿಂದ ಬಾರದೇ ಇರುವುದು.
4) ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲಿ ಸಲ್ಲಿಸಿದ ಅರ್ಜಿ ಕಳೆದಿದ್ದರಿಂದ ಜಿಲ್ಲೆಯ ಮಕ್ಕಳಿಗೆ ಅನಾನುಕೂಲವಾಗಿರುವುದು.
5) ಜನ ಪ್ರತಿನಿಧಿಗಳು ಮಕ್ಕಳ ನ್ಯಾಯ ಕಾಯಿದೆ ಹಾಗೂ ಮಕ್ಕಳ ಹಕ್ಕುಗಳನ್ನು ಉಲ್ಲಂಘನೆ ಮಾಡುತ್ತಿರುವುದು.
6) ಮಕ್ಕಳ ರಕ್ಷಣೆ ಮಾಡುವ ಕಾರ್ಯಕರ್ತರಿಗೆ ಸೂಕ್ತ ರಕ್ಷಣೆ ಇಲ್ಲದಿರುವುದು.
7) ಸಾಮೂಹಿಕ ಬಾಲ್ಯವಿವಾಹಗಳನ್ನು ತಡೆಯಲು ತಹಸಿಲ್ದಾರರು ಗಂಭೀರವಾಗಿ ಸಮಸ್ಯೆ ಪರಿಗಣಿಸದೇ ಇರುವುದು.
8) ಗೌರವಧನ ಕಡಿಮೆ ಇರುವುದರಿಂದ ಕೆಸಾಪ್ಸ್ ಯೋಜನೆಯಲ್ಲಿ ವೈದ್ಯರು ಸೇವೆ ಸಲ್ಲಿಸಲು ಹಿಂದೇಟು ಹಾಕುತ್ತಿರುವರು.
9) ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮಕ್ಕಳ ರಕ್ಷಣೆಯಲ್ಲಿ ತಾವು ನೇರವಾಗಿ ಪಾಲ್ಗೊಳ್ಳದೇ ಕಾರ್ಯಕರ್ತರನ್ನು ಕಳಿಸುವುದು.
10) ಸಾರ್ವಜನಿಕರಿಗೆ/ಗ್ರಾಮೀಣ ಜನರಿಗೆ ಸರ್ಕಾರಿ ಯೋಜನೆಗಳ ಬಗ್ಗೆ ತಳಮಟ್ಟದಲ್ಲಿ ಅರಿವಿನ ಕೊರತೆ.
11) ಮಕ್ಕಳ ಪುನರ್ವಸತಿಗೆ ಇರುವ ಹಲವು ಯೋಜನೆಗಳನ್ನು ಯೋಗ್ಯವಾಗಿ ಅನುಷ್ಟಾನಗೊಳ್ಳದಿರುವುದು.
12) ಕೆಸಾಪ್ಸ್ ಯೋಜನೆಯಲ್ಲಿ ಬೀದಿನಾಟಕ ಪ್ರದರ್ಶನಕ್ಕೆ ಅನುದಾನದಲ್ಲಿ ಹಣ ಅತೀ ಕಡಿಮೆ ಇರುವುದು.
13) ಅಂಗನಾವಾಡಿ ಹಾಗೂ ಶಾಲೆಗಳ ಶಿಕ್ಷಕರು ಶಾಲೆಯಲ್ಲಿ ಅಂಗನವಾಡಿಗಳಲ್ಲಿ ಕರ್ತವ್ಯದಲ್ಲಿದ್ದಾಗ ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿ ಇಲ್ಲದಿರುವುದು.
14) ಸಾರ್ವಜನಿಕರಲ್ಲಿ ಸರ್ಕಾರಿ ವ್ಯವಸ್ಥೆ ಬಗ್ಗೆ ನಂಬಿಕೆ ಕಡಿಯಾಗಿರುವುದು.
15) ಸರ್ಕಾರಿ ಯೋಜನೆಗಳು ಸೂಕ್ತ ಬಡಜನರಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಮುಟ್ಟದೇ ಇರುವುದರಿಂದ ವಲಸೆ ಹೋಗಿರುವುದು.
16) ಶಾಲೆಗಳಲ್ಲಿ/ಅಂಗನವಾಡಿಗಲ್ಲಿ ಭೌತಿಕ ಸುಧಾರಣೆಯಲ್ಲಿ ವ್ಯಾಪಕ ಕಳಪೆ ಅಭಿವೃದ್ಧಿ.

**ಮುಂದಿನ ಯೋಜನೆಗಳು**

1) ಚೈಲ್ಡ್‌ಲೈನ್, ಐಎಲ್‌ಪಿ ಹಾಗೂ ಎನ್‌ಎಮ್‌ಡಿ ಸಿಬ್ಬಂದಿಗಳಿಗೆ ತರಬೇತಿ ನೀಡುವುದು.
2) ಬಾಲ್ಯವಿವಾಹ ನಿಷೇದ ಕುರಿತು ಜಿಲ್ಲಾಡಳಿತದೊಂದಿಗೆ ವಕಾಲತ್ತು ಮಾಡಿ ನಿಯಂತ್ರಿಸುವುದು.
3) ಎಲ್ಲ ಸಂಬಂಧಿಸಿದ ಇಲಾಖೆಗಳೊಂದಿಗೆ ಸಂಪರ್ಕ ಇಟ್ಟುಕೊಂಡು ಕ್ಷೇತ್ರದಲ್ಲಿ ಸೇವೆ ಸಲ್ಲಿಸುವುದು.
4) ಸಂಸ್ಥೆಯ ಸ್ವಾಯತ್ತತೆಯ ಬಗ್ಗೆ ಹೆಚ್ಚು ಒತ್ತು ಕೊಡಲು ಕಾರ್ಯದ ಕುರಿತು ಸಂಸ್ಥೆಯ ಮುಖ್ಯಸ್ಥರೊಂದಿಗೆ ಕ್ರೀಯಾ ಯೋಜನೆ ತಯಾರಿಸುವುದು.
5) ನಮ್ಮೂರು ಯೋಜನೆಯಿಂದ ಉಸಿರಿಗಾಗಿ ಹಸಿರು ಕಾರ್ಯಕ್ರಮ ಅನುಷ್ಟಾನವನ್ನು ಸ್ಥಳಿಯ ಸಮುದಾಯದ ನಾಯಕತ್ವದೊಂದಿಗೆ ಹಮ್ಮಿಕೊಳ್ಳುವುದು.
6) ನಮ್ಮ ಮಕ್ಕಳ ಧಾಮದಲ್ಲಿ ವೈದ್ಯರ ಸಮಾಲೋಚನಾ ಕೋಣೆ, ಔಷಧ ಸಂಗ್ರಹಣಾ ಕೋಣೆ, ಚಿಕಿತ್ಸೆ ಕೋಣೆ ನಿರ್ಮಾಣ ಮಾಡುವುದು.
7) ನಮ್ಮ ಮಕ್ಕಳ ಧಾಮದಲ್ಲಿ ಖಾಯಂ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.

8) ನಮ್ಮ ಮಕ್ಕಳ ಧಾಮದಲ್ಲಿ ಆವರಣದ ಸುತ್ತ ತಂತಿ ಬೇಲಿ ಹಾಕಿಸುವುದು.
9) 2 ಶೌಚಾಲಯ, 2 ಸ್ನಾನ ಗೃಹ, 2 ಚೀನಾ ಮಾದರಿ ಗುಂಡಿಗಳನ್ನು ಕಟ್ಟುವುದು.
10) ಅಡುಗೆ ಮನೆ ಕಟ್ಟಿಸುವುದು.
11) ಸಣ್ಣ ಪ್ರಮಾಣದ ಹಿಟ್ಟಿನ ಗಿರಣಿಯನ್ನು ನಮ್ಮೂರಲ್ಲಿ ಹಾಕಿಸುವುದು.
12) ಮಿನಿ ಸ್ವಿಮ್ಮಿಂಗ್ ಪೂಲ್ ಕಟ್ಟಿಸುವುದು.
13) ಸಂಸ್ಥೆಗೆ ವೆಬ್ ಮಾಡುವುದು.
14) ಸಂಸ್ಥೆಯ ಕಾರ್ಯಕರ್ತರ ಮಾನವ ಸಂಪನ್ಮೂಲ ಪುಸ್ತಕ ಪರಿಸ್ಕರಿಸಲು ಸಂಸ್ಥೆಯ ಕಾರ್ಯಕಾರಿ ಸಮಿತಿಯ ಒಪ್ಪಿಗೆ ಪಡೆಯುವುದು.
15) ಪರಿಸರ, ಬಾಲ್ಯವಿವಾಹ, ವಲಸೆ, ಮಕ್ಕಳ ತಡೆಗಟ್ಟುವಿಕೆ ಕೌಶಲ್ಯಾಭಿವೃದ್ಧಿ, ಮಕ್ಕಳ ದೌರ್ಜನ್ಯ ಕುರಿತು ವಿಶೇಷ ಯೋಜನೆ ರೂಪಿಸಿ, ಅಧಿಕಾರಿಗಳೊಂದಿಗೆ ವಕಾಲತ್ತು ಮಾಡಿ ವಿಜಯಪುರ ಜಿಲ್ಲೆಗಾಗಿ ಯೋಜನೆ ಅನುಷ್ಠಾನ ಮಾಡುವುದು.

**ಸಹಕಾರ**

1. ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ.
2. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಿಜಯಪುರ.
3. ಶಿಕ್ಷಣ ಇಲಾಖೆ ವಿಜಯಪುರ.
4. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಜಯಪುರ.
5. ಪೋಲಿಸ್ ಇಲಾಖೆ ವಿಜಯಪುರ.
6. ಸ್ಥಳೀಯ ಸಂಘ ಸಂಸ್ಥೆಗಳು ಹಾಗೂ ದಾನಿಗಳು.
7. ವಿವಿಧ ಮುದ್ರಣ ಹಾಗೂ ಇಲೇಕ್ಟ್ರಾನಿಕ್ ಮಾದ್ಯಮಗಳು.
8. ಮಹಿಳಾ ಸ್ವ-ಸಹಾಯ ಸಂಘಗಳು.
9. ಚೈಲ್ಡ್ ರೈಟ್ಸ್ ಟ್ರಸ್ಟ್ ಬೆಂಗಳೂರ.
10. ಮಕ್ಕಳ ಕಲ್ಯಾಣ ಸಮಿತಿ ವಿಜಯಪುರ.
11. ಡ್ಯಾಪ್ಕೂ ವಿಜಯಪುರ.
12. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು.
13. ಸಾಥಿ ಸಂಸ್ಥೆ, ಬೆಂಗಳೂರು. ವಿಜಯಪುರ.
14. ಮಹಿಳಾ ವಿಶ್ವವಿದ್ಯಾಲಯ.
15. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ (ಕೆ.ಸಿ.ಆರ್.ಓ.), ಬೆಂಗಳೂರು.
16. ಜಿಲ್ಲಾ ಮಕ್ಕಳ ರಕ್ಷಣಾ ಘಟಕ ವಿಜಯಪುರ.

**ವಿವಿಧ ಒಕ್ಕೂಟಗಳಲ್ಲಿ ಉಜ್ವಲ**

1) ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ- ಕರ್ನಾಟಕ.
2) ಕರ್ನಾಟಕ ರಾಜ್ಯ ತರಬೇತಿದಾರರ ಸಮುಚ್ಚಯ- ಮಂಗಳೂರು.
3) ವಾಣಿ (ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ) – ದೆಹಲಿ.
4) ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ – ಬೆಂಗಳೂರು.
5) ನೆಟ್-ಕೆ ಒಕ್ಕೂಟ, ಕರ್ನಾಟಕ.

6) ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಧ್ವನಿ ಒಕ್ಕೂಟ –ವಿಜಯಪುರ.
7) ಫೇವಾರ್ಡ–ಕರ್ನಾಟಕ.
8) ಮಕ್ಕಳ ಸಾಗಾಣಿಕೆ ವಿರೋಧಿ ಆಂದೋಲನ –ಕರ್ನಾಟಕ.

## G¥À ¸ÀAºÁgÀ

ಸಮಯಕ್ಕೆ ಸರಿಯಾಗಿ ಬಾರದ ಯೋಜನೆಗಳ ಹಣಕಾಸು ಸಹಾಯ ಒಮ್ಮೊಮ್ಮೆ ನಿರಾಸೆ ತಂದರೂ ಇಷ್ಟು ವರ್ಷದಿಂದ ಮಾಡಿದ ರೂಢಿ ನಮ್ಮ ಸೇವೆ ನಿಲ್ಲಸಲು ಬಿಡಲಿಲ್ಲ. ಕೆಲವು ಕಾರ್ಯಕರ್ತರ ಅತ್ಯುತ್ಸಾಹ ಕೆಲವರ ನಿರಾಸಕ್ತಿ ಸೇವೆಯಲ್ಲಿ ತೋರಿದರೂ ಅವರು ಪ್ರೋತ್ಸಾಹ ನೀಡಿ ಗುರಿ ಮುಟ್ಟುವಲ್ಲಿ ಸಫಲರಾಗಿದ್ದೇವೆ. ನಮ್ಮೂರು ಯೋಜನೆಯ ನಮ್ಮ ಮಕ್ಕಳಧಾಮ ಸಾವಯವ ಕೃಷಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಸಮುದಾಯ ಆಧಾರಿತವಾಗಿ ನಡೆಯುವುದು. ನಮಗೆ ಖುಷಿ ನೀಡುವದರೊಂದಿಗೆ ಸಂಸ್ಥೆಯ ಸೇವೆಗೆ ಬೆಂಬಲವಾಗಿ ನಿಂತಿದೆ. ಅಂದುಕೊಂಡ, ಯೋಚಿಸಿದ, ಕಾರ್ಯಕ್ಷೇತ್ರದಲ್ಲಿದ್ದಾಗ ಹೀಗೆ ಮಾಡಿದರೆ ಸರಿ ಎಂದು ನಮಗೆ ಅನಿಸಿದರೆ ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತೇವೆ. ಹಾಗೂ ಸೇವೆಯಲ್ಲಿ ತೊಡಗಿದಾಗ ಫಲ ಕೂಡಾ ನೀಡಿದೆ. ಮಕ್ಕಳು ಆಸ್ಪತ್ರೆಯಲ್ಲಿ ಸಾವು ಬದುಕಿನ ಮಧ್ಯ ಹೋರಾಡುವಾಗ ಕಾರ್ಯಕರ್ತರ ಪ್ರಯತ್ನ ಸರ್ಕಾರಿ ಆಸ್ಪತ್ರೆಯವರ ಪ್ರಾಮಾಣಿಕ ಸೇವೆಯಿಂದ ಮಕ್ಕಳು ಬದುಕಿ ಉಳಿದಿದ್ದಾರೆ. ಸೇವೆಯಲ್ಲಿಯ ಹಲವಾರು ತೊಂದರೆಗಳಿದ್ದರೂ ಕ್ಷೇತ್ರಕ್ಕೆ ಭೇಟಿ ನೀಡಿದ ಗಣ್ಯರ ಪ್ರೋತ್ಸಾಹ ಅವರು ನೀಡುವ ಸನ್ಮಾನಗಳು ನಮ್ಮನ್ನು ಖುಷಿಗೊಳಿಸುತ್ತವೆ. ಸಮಾಜಕ್ಕೊಂದು ಏನಾದರೂ ಉಪಯೋಗವಾಗುವ ಸೇವೆ ಸಂಸ್ಥೆಯಿಂದ ಹೊರ ಬರಲಿ ಅದು ಸಮಾಜ ನಿರಂತರವಾಗಿ ನೆನೆಸುವಂತಾಗಲಿ ಎನ್ನುವ ಆಶಾವಾದ ನಮ್ಮಲ್ಲಿದೆ.

ವರದಿ:

ವಾಸುದೇವ ತೋಳಬಂದಿ

ಕಾರ್ಯದರ್ಶಿಗಳು,

ಉಜ್ವಲ ಸಂಸ್ಥೆ ವಿಜಯಪುರ.